# ವೈವಿಧ್ಯವನ್ನು ಅರ್ಥಮಾಡಿಕೊಳ್ಳುವುದು

ನಾವು ತರಗತಿಯಲ್ಲಿ ವಿಭಿನ್ನ ಸಾಮರ್ಥ್ಯಗಳು, ಆಸಕ್ತಿಗಳು, ನಡವಳಿಕೆಗಳು ಮತ್ತು ಅರ್ಹತೆಗಳನ್ನು ಹೊಂದಿರುವ ವಿವಿಧ ಹಿನ್ನಲೆಯಿಂದ ಬಂದಂತಹ ಹಲವಾರು ಮಕ್ಕಳನ್ನು ಕಾಣುತ್ತೇವೆ.

ಮೇಲ್ನೋಟಕ್ಕೆ ಕಾಣುವ ಹೋಲಿಕೆಗಳು ಮತ್ತು ಮಕ್ಕಳು ಗುಂಪಿನಲ್ಲಿ ನಡೆದುಕೊಳ್ಳುವ ರೀತಿಯ ಹೊರತಾಗಿಯೂ, ಪ್ರತಿ ಮಗುವೂ ವಿಶಿಷ್ಟವಾದುದಾಗಿದೆ ಮತ್ತು ತನ್ನದೇ ವೈಯಕ್ತಿಕ ಕಲಿಕಾ ಶೈಲಿ ಮತ್ತು ಕಲಿಕೆಯ ಅಗತ್ಯಗಳನ್ನು ಹೊಂದಿರುತ್ತದೆ. ಒಂದು ತರಗತಿಯು ವಿವಿಧ ಪ್ರದೇಶಗಳು, ಸಂಸ್ಕೃತಿಗಳು, ಧರ್ಮಗಳು, ಭಾಷೆಗಳು, ಸಾಮಾಜೋ-ಆರ್ಥಿಕ ಹಿನ್ನೆಲೆ ಮತ್ತು ಸಂಪ್ರದಾಯಗಳಿಂದ ಬರುವ ಮಕ್ಕಳ ಪಾಲಿಗೆ ಒಂದು ನೆಲೆಯಾಗಿದೆ.

ಬಾಲ್ಯಪೂರ್ವ ಆರೈಕೆ ಮತ್ತು ಶಿಕ್ಷಣ/ಶಾಲಾಪೂರ್ವ ಶಿಕ್ಷಣ (ಇಸಿಸಿಇ) ದ ಕಾರ್ಯಕ್ರಮದಲ್ಲಿ ತೊಡಗಿರುವ ಪ್ರತಿಯೊಬ್ಬರೂ ವಿವಿಧ ಕಲಿಕೆಯ ಅಗತ್ಯತೆಗಳೊಂದಿಗೆ ತಮ್ಮನ್ನು ತಾವು ಪರಿಚಿತರಾಗುವಂತೆ ಮಾಡಿಕೊಳ್ಳುವುದು ಮತ್ತು ದೈನಂದಿನ ಬೋಧನಾ ಚಟುವಟಿಕೆಗಳನ್ನು ಯೋಜಿಸಲು ಮತ್ತು ಅವುಗಳನ್ನು ಅನುಷ್ಠಾನಗೊಳಿಸಲು ಅವುಗಳ ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವುದು ಅತ್ಯಗತ್ಯ.

ಈ ಅಧ್ಯಾಯದಲ್ಲಿ, ವೈವಿಧ್ಯದ ಮೂಲಭೂತ ಅಂಶಗಳು ಮತ್ತು ವೈವಿಧ್ಯಕ್ಕೆ ಕಾರಣವಾಗಿರುವ ವಿವಿಧ ಅಂಶಗಳನ್ನು ನೀವು ಅಧ್ಯಯನ ಮಾಡುತ್ತೀರಿ. ಜೊತೆಗೆ ಶೈಕ್ಷಣಿಕ ಅಗತ್ಯಗಳ ಮೇಲೆ ವೈವಿಧ್ಯತೆ ಉಂಟು ಮಾಡುವ ಪರಿಣಾಮ ಮತ್ತು ವೈವಿಧ್ಯದ ಪ್ರಾಮುಖ್ಯವನ್ನು ಹಾಗೂ ಎಲ್ಲಾ ಮಕ್ಕಳು ಶಾಲಾಪೂರ್ವ ಶಿಕ್ಷಣದ ಕಾರ್ಯಕ್ರಮವನ್ನು ಪಡೆಯುವಂತೆ ಮಾಡಲು ಮತ್ತು ಅವರನ್ನು ಪ್ರತಿಯೊಂದು ಕಾರ್ಯಚಟುವಟಿಕೆಗಳಲ್ಲಿ ಸಮಾನವಾಗಿ ಮಾಡುವಲ್ಲಿ ಇರುವ ಪರಿಣಾಮಗಳ ಬಗ್ಗೆಯೂ ಸಹ ನೀವು ಅಧ್ಯಯನ ಮಾಡುತ್ತೀರಿ.

**ಕಲಿಕಾ ಫಲಿತಗಳು:**

ಈ ಪಾಠವನ್ನು ಅಧ್ಯಯನ ಮಾಡಿದ ನಂತರ, ನೀವು ಇವುಗಳನ್ನು ಅರ್ಥೈಸಿಕೊಳ್ಳುವಲ್ಲಿ ಸಮರ್ಥರಾಗುತ್ತೀರಿ.

- ವೈವಿಧ್ಯವನ್ನು ವ್ಯಾಖ್ಯಾನಿಸುವುದು
- ವೈವಿಧ್ಯಕ್ಕೆ ಕಾರಣವಾಗಿರುವ ವಿವಿಧ ಅಂಶಗಳು ಮತ್ತು ಅವುಗಳ ಪರಿಣಾಮಗಳನ್ನು ವಿವರಿಸುವುದು
- ಮಾತೃಭಾಷೆ ಮತ್ತು ಶಾಲೆಯಲ್ಲಿ ಬೋಧಿಸುವ ಭಾಷಾ ಮಾಧ್ಯಮದಲ್ಲಿನ ವ್ಯತ್ಯಾಸಗಳನ್ನು ಚರ್ಚಿಸುವುದು
- ಮಕ್ಕಳ ಬೆಳವಣಿಗೆಯ ಮೇಲೆ ಸಿದ್ಧಮಾದರಿಯ ಲಿಂಗ ಮತ್ತು ಜಾತಿಯ ಪ್ರಭಾವಗಳನ್ನು ವಿವರಿಸುವುದು; ಮತ್ತು
- ಕಲಿಕೆ ಮತ್ತು ಆಟದಲ್ಲಿ ಎಲ್ಲರ ಸಮಾನ ಭಾಗವಹಿಸುವಿಕೆಯನ್ನು ಉತ್ತೇಜಿಸುವಂತಹ ವಿಧಾನಗಳನ್ನು ಕುರಿತು ಚರ್ಚಿಸುವುದು

**20.1** ವೈವಿಧ್ಯವನ್ನು ಅರ್ಥ ಮಾಡಿಕೊಳ್ಳುವುದು

ಶಿಕ್ಷಕರು ತರಗತಿಯ ಬೋಧನೆ-ಕಲಿಕೆಯನ್ನು ವಿವಿಧ ಹಬ್ಬಗಳ ಸಂದರ್ಭದಲ್ಲಿ, ವಿವಿಧ ಕುಟುಂಬಗಳು ಸೇವಿಸುವ ಆಹಾರಗಳಿಗೆ ಸಂಬಂಧಿಸುವ ಒಂದು ತರಗತಿಯೊಂದಿಗೆ ಪ್ರಾರಂಭಿಸೋಣ.

### ತರಗತಿಯ ದೃಶ್ಯ

ಸೀಮಾ ಇಂದು ಅತ್ಯಂತ ಉತ್ಸುಕಳಾಗಿದ್ದಾಳೆ ಮತ್ತು ಅವಳ ಶಿಕ್ಷಕರು ನೀಡಿದಂತಹ ತರಗತಿ ವರ್ಕ್ ಮೇಲೆ ತನ್ನ ಗಮನವನ್ನು ಕೇಂದ್ರಿಕರಿಸಲು ಅವಳಿಗೆ ಸಾಧ್ಯವಾಗುತ್ತಿಲ್ಲ. ಇಂದು ಅವಳು ಹೆಚ್ಚಿನ ತವಕದಿಂದ ಊಟದ ವಿರಾಮವನ್ನು ಕಾಯುತ್ತಿದ್ದಾಳೆ, ಏಕೆಂದರೆ ಇಂದು ಅವಳ ನೆಚ್ಚಿನ ಹಬ್ಬದ ತಿನಿಸುಗಳನ್ನು ಮತ್ತು ಹಬ್ಬಕ್ಕೆ ಸಂಬಂಧಿಸಿದ ವಿವರಣೆಗಳನ್ನು ಇಡೀ ತರಗತಿಯೊಂದಿಗೆ ಹಂಚಿಕೊಳ್ಳುವ ಸರದಿ ಅವಳದಾಗಿತ್ತು. ಹೀಗೆ ಅವರ ಶಿಕ್ಷಕರು ಆಹಾರದ ಪಾಠವನ್ನು ವಿದ್ಯಾರ್ಥಿಗಳ ದೈನಂದಿನ ಜೀವನದೊಂದಿಗೆ ಹೊಂದಿಸಿದರು.ವಿವಿಧ ಪ್ರದೇಶಗಳಲ್ಲಿನ ವಿವಿಧ ಜನರು ಹಬ್ಬಗಳಲ್ಲಿ ಮತ್ತು ವಿಶೇಷ ಸಂದರ್ಭಗಳಲ್ಲಿ ವಿವಿಧ ರೀತಿಯ ಆಹಾರಗಳನ್ನು ಬಡಿಸುತ್ತಾರೆ ಮತ್ತು ಸೇವಿಸುತ್ತಾರೆ ಎಂದು ವಿದ್ಯಾರ್ಥಿಗಳನ್ನು ಜಾಗೃತಗೊಳಿಸುವ ಪ್ರಯತ್ನವನ್ನೂ ಸಹ ಅವರು ಮಾಡಿದರು.

ನಾವು ಈಗ ತರಗತಿಯ ದೃಶ್ಯವನ್ನು ಪರಿಶೀಲಿಸೋಣ:

- ಈ ಚಟುವಟಿಕೆಯಲ್ಲಿ ತರಗತಿಯ ಎಲ್ಲಾ ಮಕ್ಕಳು ತೊಡಗಿಸಿಕೊಂಡಿದ್ದಾರೆಯೇ?

- ತರಗತಿಯಲ್ಲಿನ ವೈವಿಧ್ಯದ ಬಗ್ಗೆ ಮಕ್ಕಳಿಗೆ ತಿಳುವಳಿಕೆ ಮೂಡಿಸಲು ಶಿಕ್ಷಕರಿಗೆ ಸಾಧ್ಯವಾಗಿದೆಯೇ?

### 20.1.1 ವೈವಿಧ್ಯವನ್ನು ವ್ಯಾಖ್ಯಾನಿಸುವುದು

ವೈವಿಧ್ಯ (ಡೈವರ್ಸಿಟಿ) ಎಂಬ ಪದವು ಲ್ಯಾಟಿನ್ ಭಾಷೆಯ ಡೈವರ್ಸಸ್ ಎಂಬ ಪದದಿಂದ ಬಂದಿದೆ. ಇದು ವ್ಯತ್ಯಾಸಗಳನ್ನು ಸೂಚಿಸುವ ಅರ್ಥವನ್ನು ನೀಡುತ್ತದೆ. ವೈವಿಧ್ಯಮಯ ಎಂದರೆ 'ಪರಸ್ಪರ ವಿಭಿನ್ನ' ಮತ್ತು 'ವಿಶಿಷ್ಟ ಗುಣಲಕ್ಷಣಗಳು, ಗುಣಗಳು ಅಥವಾ ಅಂಶಗಳಿಂದ ಕೂಡಿದುದು.' ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ದೊಡ್ಡ ದೇಶವಾಗಿರುವ ಭಾರತವು ಕೊನೆಯಿಲ್ಲದ ವೈವಿಧ್ಯಮಯ ಭೌತಿಕ ಲಕ್ಷಣಗಳು ಮತ್ತು ಸಾಂಸ್ಕೃತಿಕ ಮಾದರಿಗಳನ್ನು ಹೊಂದಿದೆ. ಇದು ಜನಾಂಗ, ಧರ್ಮ, ಜಾತಿ, ಭಾಷೆ ಮತ್ತು ಇತ್ಯಾದಿಗಳನ್ನು ಒಳಗೊಂಡಿರುವ ವೈವಿಧ್ಯಗಳ ಬೀಡಾಗಿದೆ. ಶಾಲೆಯೊಳಗು ಸಹ ವಿವಿಧ ಅಸ್ಮಿತೆಗಳಾದ ಜನಾಂಗ, ಲಿಂಗ, ವಯಸ್ಸು ಮತ್ತು ಸಾಮಾಜಿಕ ಸ್ಥಾನಮಾನಗಳನ್ನು ನಾವು ನೋಡುತ್ತೇವೆ. ಆದ್ದರಿಂದ ತರಗತಿಯಲ್ಲಿ ಅವುಗಳನ್ನು ವಿವರಿಸಲು ನಾವು ಸಿದ್ಧರಾಗಬೇಕಾಗುತ್ತದೆ. ಈ ಪಾಠದ ಆರಂಭದಲ್ಲಿ ಚರ್ಚಿಸಿದಂತೆ, ಸೀಮಾಳ ಶಿಕ್ಷಕರು ಸಾಂಸ್ಕೃತಿಕ ಮತ್ತು ಪ್ರಾದೇಶಿಕ ವ್ಯತ್ಯಾಸಗಳನ್ನು ಎತ್ತಿಹಿಡಿಯಲು ಹಬ್ಬದ ಸಂದರ್ಭದಲ್ಲಿನ ಆಹಾರದ ಬಗ್ಗೆ ಹಂಚಿಕೊಳ್ಳುವ ಒಂದು ಚಿಕ್ಕ ಚಟುವಟಿಕೆಯನ್ನು ಪ್ರಾರಂಭಿಸಿದ್ದಾರೆ. ಇದು ಪಠ್ಯಕ್ರಮವನ್ನು ದೈನಂದಿನ ಜೀವನದೊಂದಿಗೆ ಹೊಂದಿಸುವುದರ ಜೊತೆಗೆ ತಮ್ಮ ಸ್ನೇಹಿತರಲ್ಲಿ ಅಸ್ತಿತ್ವದಲ್ಲಿರುವ ವೈವಿಧ್ಯಗಳ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಲು ಶಿಕ್ಷಕರು ತೆಗೆದುಕೊಂಡ ಸರಳ ಉಪಕ್ರಮವಾಗಿದೆ.

ಆದ್ದರಿಂದ ವೈವಿಧ್ಯವು ಕಣ್ಣಿಗೆ ಗೋಚರಿಸುವ ಮತ್ತು ಗೋಚರಿಸದ ಅಂಶಗಳನ್ನು ಒಳಗೊಂಡಿರುತ್ತದೆ, ಇದು ಸಮಾಜೋ-ಆರ್ಥಿಕ ಹಿನ್ನೆಲೆ, ಸಂಸ್ಕೃತಿ, ವ್ಯಕ್ತಿತ್ವ ಮತ್ತು ಕಾರ್ಯಶೈಲಿಯಂತಹ ವೈಯಕ್ತಿಕ ಗುಣಲಕ್ಷಣಗಳನ್ನು ಒಳಗೊಂಡಿರುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ವೈವಿಧ್ಯವೆಂಬ ಪದವು ವ್ಯತ್ಯಾಸಗಳನ್ನು ಅಥವಾ ವಿಶಿಷ್ಟ ಗುಣಲಕ್ಷಣಗಳನ್ನು - ತತ್ಸಂಬಂಧಿತವಾದ ಯಾವುದೇ ನಿರ್ಣಯ,

ತೀರ್ಮಾನಗಳಿಗೆ ಬಾರದೇ -ಗುರುತಿಸುವುದಾಗಿದೆ. . ವೈವಿಧ್ಯವು ವಿವಿಧತೆಯ ಮೂಲವನ್ನು ಲೆಕ್ಕಿಸದೆ ಎಲ್ಲ ಬಗೆಯ ವೈಯಕ್ತಿಕ ವ್ಯತ್ಯಾಸಗಳನ್ನು ಗುರುತಿಸುತ್ತದೆ, ಅಂಗೀಕರಿಸುತ್ತದೆ ಮತ್ತು ಗೌರವಿಸುತ್ತದೆ.

ಶಾಲೆಯ ವೈವಿಧ್ಯಮಯ ಗುಂಪುಗಳು ಸುರಕ್ಷಿತವಾದ, ಧನಾತ್ಮಕವಾದ ಹಾಗೂ ಕಲಿಕಾ ಪೋಷಣೆಯ ಪರಿಸರದಲ್ಲಿ ಪರಸ್ಪರ ಕಲಿಕೆ, ಅನ್ವೇಷಣೆ ಮತ್ತು ಆಚರಣೆಗಳಿಗೆ ಅವಕಾಶಗಳನ್ನು ಒದಗಿಸುತ್ತದೆ. ವೈವಿಧ್ಯವನ್ನು ವಿವಿಧ ಗುಂಪುಗಳ ಸದಸ್ಯರ ಗುಣಲಕ್ಷಣಗಳು ಮತ್ತು ಅನನ್ಯತೆಯ ಸಂಗ್ರಹವೆಂದೂ ಸಹ ಹೇಳಬಹುದಾಗಿದೆ. ನಮಗಿಂತಲೂ ವಿಭಿನ್ನವಾಗಿ ಯೋಚಿಸುವ, ವರ್ತಿಸುವ ಅಥವಾ ಕಾರ್ಯನಿರ್ವಹಿಸುವ ವ್ಯಕ್ತಿಗಳೊಂದಿಗೆ ತೊಡಗಿಕೊಳ್ಳುವ ನಿಟ್ಟಿನಲ್ಲಿಯೂ ವೈವಿಧ್ಯವನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯವಾಗಿದೆ.

## 20.2 ವೈವಿಧ್ಯಕ್ಕೆ ಕಾರಣವಾಗಿರುವ ಅಂಶಗಳು ಮತ್ತು ಕಲಿಕೆಯಲ್ಲಿ ಅವುಗಳ ಪರಿಣಾಮಗಳು

ಅತೀ ಹೆಚ್ಚಿನ ಸಂಖ್ಯೆಯಲ್ಲಿ ನಿಕಟವಾಗಿ ಹಾಗೂ ಪರಿಪೂರ್ಣವಾಗಿ ಒಟ್ಟಿಗೆ ಹೆಣೆದಿರುವ ವಿಭಿನ್ನ ಸಂಸ್ಕೃತಿಗಳು ಭಾರತದ ವೈವಿಧ್ಯವನ್ನು ಜಗತ್ತಿನ ಅದ್ಭುತಗಳಲ್ಲಿ ಒಂದನ್ನಾಗಿಸಿದೆ.ಸಾಮಾನ್ಯವಾಗಿ, ಜನರು ವೈವಿಧ್ಯಗಳ ಕುರಿತು ಚರ್ಚಿಸುವಾಗ, ಅವರ ಮಾತುಕತೆ ಹೆಚ್ಚಾಗಿ ಧರ್ಮ ಮತ್ತು ಜಾತಿಯ ಕುರಿತದ್ದಾಗಿರುತ್ತದೆ. ಆದಾಗ್ಯೂ, ವೈವಿಧ್ಯದ ಬಗ್ಗೆ ನಿಖರವಾಗಿ , ವಿಶೇಷವಾಗಿ ತರಗತಿಯಲ್ಲಿ, ಮಾತನಾಡುವಾಗ ನಾವು ಇನ್ನೂ ಹೆಚ್ಚಿನ ಅಂಶಗಳನ್ನು ಪರಿಗಣಿಸಬೇಕಾಗುತ್ತದೆ:

- ಜನಾಂಗ
- ಬಹುಭಾಷಿಕತೆ
- ಜನಾಂಗೀಯತೆ
- ಲಿಂಗ
- ಸಾಮಾಜಿೋ-ಆರ್ಥಿಕ ಸ್ಥಿತಿ
- ವಯಸ್ಸು
- ದೈಹಿಕ ಚಟುವಟಿಕೆಗಳ ಮಟ್ಟ
- ಧಾರ್ಮಿಕ ನಂಬಿಕೆಗಳು

- ಕಲಿಕೆಯ ಶೈಲಿ

ಮೇಲಿನ ಪಟ್ಟಿಯು ಸಮಗ್ರವಾದುದಲ್ಲ. ಇನ್ನೂ ಹೆಚ್ಚಿನ ಅಂಶಗಳನ್ನು ಈ ಪಟ್ಟಿಯಲ್ಲಿ ಸೇರಿಸಬಹುದಾಗಿದೆ. ಈ ಮೇಲಿನ ಪ್ರತಿಯೊಂದು ಅಂಶವೂ ಹೇಗೆ ವಿವಿಧತೆಯನ್ನು ಉಂಟುಮಾಡುತ್ತವೆ ಮತ್ತು ನಮ್ಮ ಶಾಲೆ ಮತ್ತು ತರಗತಿಗಳಲ್ಲಿ ಬೋಧನಾ-ಕಲಿಕೆಯ ವಾತಾವರಣದ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ನಾವು ಈಗ ಅರ್ಥಮಾಡಿಕೊಳ್ಳೋಣ.

**ಜನಾಂಗ: ಜನಾಂಗವೆಂಬುದು** ಎತ್ತರ, ತೂಕ, ಕಣ್ಣಿನ ಬಣ್ಣ, ಚರ್ಮ ಮತ್ತು ಇತ್ಯಾದಿಗಳ ಶಾರೀರಿಕ ಗುಣಲಕ್ಷಣಗಳ ಆಧಾರದ ಮೇಲೆ ಹಾಗೆಯೇ ಸಾಮಾಜಿಕ ನಡವಳಿಕೆಗಳು, ರೂಢಿಗಳು, ಪದ್ಧತಿಗಳು ಮತ್ತು ಆಚರಣೆ/ಅಭ್ಯಾಸಗಳ ಆಧಾರದಲ್ಲಿ ಮನುಷ್ಯಕುಲವನ್ನು ವಿಂಗಡಿಸುವುದಾಗಿದೆ.

ಇದೊಂದು ವಿಸ್ತೃತ ವರ್ಗೀಕರಣ ವ್ಯವಸ್ಥೆಯಾಗಿದ್ದು, ದೇಹದ ರಚನೆ ಅಥವಾ ಮೈಕಟ್ಟಿಗೆ ಸಂಬಂಧಿಸಿದ ಅಂಗಗಳ ರಚನೆಯ ವೈಶಿಷ್ಟ್ಯಗಳ ಆಧಾರದಲ್ಲಿ ಮನುಷ್ಯರನ್ನು ವಿಭಿನ್ನ ಗುಂಪುಗಳಾಗಿ ವರ್ಗೀಕರಿಸಲು ಬಳಸಲಾಗುತ್ತದೆ. ಇವೆಲ್ಲವೂ ಹೆಚ್ಚಾಗಿ ಆನುವಂಶಿಕವಾದುದು, ಪೋಷಕರಿಂದ ಮಕ್ಕಳಿಗೆ ವಂಶಾನುಗತವಾಗಿ ಬಂದಿರುವಂತಹುದು. ಈ ವ್ಯತ್ಯಾಸಗಳು ಭೌಗೋಳಿಕ, ಐತಿಹಾಸಿಕ, ಭಾಷಿಕ ಅಥವಾ ಧಾರ್ಮಿಕ ಸಂಬಂಧದ ಕಾರಣದಿಂದ ಉಂಟಾಗಿವೆ.

**ಚಟುವಟಿಕೆ 20.1**

ಬೇರೆ ಬೇರೆ ಜನಾಂಗದ ಮಕ್ಕಳನ್ನು ನೀವು ಭೇಟಿ ಮಾಡಿದ್ದರೆ, ಆ ಸನ್ನಿವೇಶವನ್ನು ಈಗ ನೀವು ನೆನಪಿಸಿಕೊಳ್ಳಬಹುದೇ? ನಿಮ್ಮ ಮತ್ತು ಅವರ ನಡುವೆ ಯಾವುದಾದರೂ ಹೋಲಿಕೆ ಅಥವಾ ವ್ಯತ್ಯಾಸಗಳನ್ನು ನೀವು ಗಮನಿಸಿದ್ದೀರಾ?

ವಿಭಿನ್ನ ಶಾರೀರಿಕ ಗುಣಲಕ್ಷಣಗಳನ್ನು ಹೊಂದಿರುವ ಮಕ್ಕಳು ತರಗತಿಯ ಪ್ರಕ್ರಿಯೆಗಳ ಮೇಲೆ ನೇರವಾಗಿ ಪರಿಣಾಮ ಬೀರದಿದ್ದರೂ, ತರಗತಿಯ ಕ್ರಿಯಾಶೀಲತೆಗೆ ಹೆಚ್ಚು

ಪರಿಣಾಮಗಳನ್ನು ಬೀರಬಹುದು. ಅಂದರೆ ಎತ್ತರವಾಗಿರುವ ಮಕ್ಕಳನ್ನು ಕ್ರೀಡೆಗಳಿಗೆ ಆಯ್ಕೆ ಮಾಡುವುದು, ಸುಂದರ ಮೈಬಣ್ಣದ ಮಕ್ಕಳು ಮೆಚ್ಚುಗೆಗೆ ಪಾತ್ರರಾಗುವುದು, ಕೆಲವು ಮಕ್ಕಳ ಕಣ್ಣುಗಳ ನಿರ್ದಿಷ್ಟ ಬಣ್ಣ ಅಥವಾ ಆಕಾರವನ್ನು ಇತರರು ಸುಲಭವಾಗಿ ಒಪ್ಪಿಕೊಳ್ಳದಿರುವುದು, ಸುಂದರ ಮೈಬಣ್ಣದ ಹೊಂದಿರುವ ಮಗುವನ್ನು ರಾಜ/ರಾಣಿ/ಅಪ್ಸರೆಯಂತಹ ಪಾತ್ರಕ್ಕೆ ಶಿಕ್ಷಕರು ಮೊದಲು ಆಯ್ಕೆ ಮಾಡಿಕೊಳ್ಳಬಹುದು, ಆದರೆ ಇದು ಸುಂದರ ತ್ವಚೆಯುಳ್ಳವರಷ್ಟೇ ರಾಜ/ರಾಣಿ/ಅಪ್ಸರೆಯರು ಆಗಲು ಸಾಧ್ಯ ಎಂದು ಇತರೆ ಮಕ್ಕಳು ಭಾವಿಸುವಂತೆ ಮಾಡುತ್ತದೆ. ಇದು ಸಿದ್ಧಮಾದರಿಯ ಕಲ್ಪನೆಯನ್ನು ಸೃಷ್ಟಿಸುತ್ತದೆ, ಇಂತಹ ಸಿದ್ಧಮಾದರಿಯ ಕಲ್ಪನೆಗಳನ್ನು ನಿವಾರಿಸಲು ಸಾಧ್ಯವಿದೆ. ಜನಾಂಗಕ್ಕೆ ಸಂಬಂಧಿಸಿದಂತೆ ಶಾರೀರಿಕ ಗುಣಲಕ್ಷಣಗಳಲ್ಲಿ ಕಂಡುಬರುವ ವೈವಿಧ್ಯವು ಪ್ರಾಕೃತಿಕ ವಿದ್ಯಮಾನವಾಗಿದೆ ಮತ್ತು ಅದು ಇದ್ದಂತೆ ಒಪ್ಪಿಕೊಳ್ಳಬೇಕಾಗುತ್ತದೆ.

**ಜಾತಿ**: ಭಾರತದಲ್ಲಿ ಜಾತಿಯು ಹುಟ್ಟಿನಿಂದಲೇ ನಿರ್ಧಾರಿತವಾಗುವ ಒಂದು ವರ್ಗೀಕರಣ ವ್ಯವಸ್ಥೆಯಾಗಿದೆ. ರೂಢಿ-ಸಂಪ್ರದಾಯ, ಕಾನೂನು, ಕಾಯ್ದೆ ಅಥವಾ ಧರ್ಮದಿಂದ ದೃಢೀಕರಿಸಲಾದ ವಂಶಾನುಗತ ಸಾಮಾಜಿಕ ಸ್ಥಿತಿ ಮತ್ತು ಸಾಮಾಜಿಕ ಅಡೆತಡೆಗಳಿಂದ ನಿರೂಪಿಸಲ್ಪಟ್ಟ ಕಟ್ಟುನಿಟ್ಟಾದ ಸಾಮಾಜಿಕ ವರ್ಗಗಳ ವ್ಯವಸ್ಥೆಯನ್ನು ಜಾತಿ ಎಂದು ವ್ಯಾಖ್ಯಾನಿಸಬಹುದಾಗಿದೆ.ಭಾರತೀಯ ಸನ್ನಿವೇಶದಲ್ಲಿ, ಜಾತಿಯು ಒಂದು ಸಾಮಾಜಿಕ ಸಮೂಹವಾಗಿದ್ದು, ಈ ಸಮೂಹದಲ್ಲಿ ಸದಸ್ಯನಾಗಿ ಹುಟ್ಟಿದವನಿಗೆ ಮಾತ್ರ ಸದಸ್ಯತನವಿರುವುದು ಮತ್ತು ಹಾಗೆ ಹುಟ್ಟಿದವರೆಲ್ಲರೂ ಅದರಲ್ಲಿ ಸೇರ್ಪಡೆಯಾಗುವರು. ಒಂದು ಜಾತಿಯ ಗುಂಪಿನ ಸದಸ್ಯರು ಸಾಮಾನ್ಯವಾಗಿ ಒಳಬಾಂಧವ್ಯವನ್ನು ಹೊಂದಿರುತ್ತಾರೆ. ಅಂದರೆ ಅವರು ತಮ್ಮ ತಮ್ಮ ಜಾತಿಯಲ್ಲಿಯೇ ಮದುವೆಯಾಗಲು ಹೆಚ್ಚು ಆಸಕ್ತಿ ಹೊಂದಿರುತ್ತಾರೆ. ಜಾತಿಗಳನ್ನು ಕೆಳಗಿನಂತೆ ವಿಸ್ತಾರವಾಗಿ ವಿಂಗಡಿಸಲಾಗಿದೆ:

- ಪರಿಶಿಷ್ಟ ಜಾತಿಗಳು
- ಪರಿಶಿಷ್ಟ ಬುಡಕಟ್ಟುಗಳು
- ಇತರೆ ಹಿಂದುಳಿದ ವರ್ಗಗಳು
- ಮುಂದುವರೆದ ವರ್ಗಗಳು

ಸಾಮಾಜಿಕವಾಗಿ ಜಾತಿ ವ್ಯವಸ್ಥೆಯು ಜನರನ್ನು ಸಾಮಾಜಿಕ ಗುಂಪುಗಳಾಗಿ (ಜಾತಿಗಳು) ವಿಭಜಿಸುತ್ತದೆ. ಅಲ್ಲಿ ಕರ್ತವ್ಯಗಳು ಮತ್ತು ಹಕ್ಕುಗಳನ್ನು ಹುಟ್ಟಿನಿಂದಲೇ ನಿರ್ಧರಿಸಲಾಗುತ್ತದೆ. ವಿವಿಧ ಜಾತಿಗಳಲ್ಲಿ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು ಅಸಮಾನವೂ, ಶ್ರೇಣೀಕೃತವೂ ಆಗಿರುತ್ತದೆ. ಶೈಕ್ಷಣಿಕ ಸ್ಥಳವಾಗಿರುವ ಶಾಲೆಯು ಸಮಾನತೆ ಮತ್ತು ಸಮಾನಾವಕಾಶವನ್ನು ಪ್ರಚಾರ ಮಾಡುವಂತಿರಬೇಕೆ ಹೊರತು, ಅಲ್ಲಿ ಜಾತಿ ಆಧಾರಿತವಾದ ಯಾವುದೇ ತಾರತಮ್ಯವನ್ನು ಉತ್ತೇಜಿಸಬಾರದು. ಶಾಲೆಗಳು ತಾರತಮ್ಯಕ್ಕೆ ಸಂಬಂಧಿಸಿದಂತೆ ಎದುರಿಸುತ್ತಿರುವ ಕೆಲವು ಸಮಸ್ಯೆಗಳೆಂದರೆ ಮಧ್ಯಾಹ್ನ ವಿತರಿಸುವ ಊಟದ ಸಮಯದಲ್ಲಿ, ಕುಳಿತುಕೊಳ್ಳುವ ವ್ಯವಸ್ಥೆಯಲ್ಲಿ ಮತ್ತು ಕಲಿಕಾ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳುವಲ್ಲಿ ನಾವು ಹೆಚ್ಚು ತಾರತಮ್ಯವನ್ನು ಕಾಣಬಹುದಾಗಿದೆ. ಹೆಚ್ಚಾಗಿ ನಾವು ಗಮನಿಸಿದಂತೆ ತಪ್ಪಿಸಲಸಾಧ್ಯವಾದ ಮತ್ತೊಂದು ಅಭ್ಯಾಸವೆಂದರೆ ಅದು ಶಾಲಾ ಸ್ಥಳ/ಪ್ರದೇಶಕ್ಕೆ ಸಂಬಂಧಿಸಿದ್ದಾಗಿದೆ. ಒಂದುವೇಳೆ ಶಾಲೆಯನ್ನು ಕೆಳಜಾತಿಯ ಕಾಲೋನಿಯ ಸಮೀಪದಲ್ಲಿ ನಿರ್ಮಿಸಬೇಕಾದ ಸಂದರ್ಭ ಒದಗಿಬಂದರೆ, ಮೇಲ್ಜಾತಿಯ ಜನರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ನಿರಾಕರಿಸಬಹುದು. ವ್ಯತಿರಿಕ್ತ ಪರಿಸ್ಥಿತಿಯಲ್ಲಿ ಮೇಲ್ಜಾತಿ ಜನರ ಕಾಲೋನಿಯಲ್ಲಿ ಅಥವಾ ನಿವಾಸದ ಬಳಿ ಶಾಲೆಗಳು ಇದ್ದ ಪಕ್ಷದಲ್ಲಿ, ಕೆಳಜಾತಿಯ ಮಕ್ಕಳು ಶಾಲೆಗೆ ಬರಲು, ಓದಲು ಸಂಕೋಚ, ನಿರುತ್ಸಾಹ ಮತ್ತು ಹಿಂಜರಿಕೆಯನ್ನು ತೋರಿಸಬಹುದು.

**ಬಹುಭಾಷಿಕತೆ:** ಭಾರತದಲ್ಲಿ ಪ್ರತಿಯೊಂದು ರಾಜ್ಯಕ್ಕೂ ಸಹ ತನ್ನದೇ ಆದ ಭಾಷೆ ಇದೆ. ಭಾಷೆಯ ಉಚ್ಚಾರಣೆ ಮಾತ್ರವಲ್ಲ, ಪ್ರದೇಶದಿಂದ ಪ್ರದೇಶಕ್ಕೆ ಆಡುನುಡಿಯೂ ಬದಲಾವಣೆಯಾಗುತ್ತದೆ. ಬಹುಭಾಷಿಕತೆಯು ಒಬ್ಬ ವ್ಯಕ್ತಿ ಅಥವಾ ಒಂದು ಸಮುದಾಯ ಹಲವು ಭಾಷೆಗಳನ್ನು ಬಳಸುವ ಅಥವಾ ಹಲವು ಭಾಷಾ ಬಳಕೆಯನ್ನು ಪ್ರವರ್ಧಿಸುವ ಒಂದು ಭಾಷಾ ಪ್ರಕ್ರಿಯೆಯಾಗಿದೆ. ಒಂದಕ್ಕಿಂತ ಹೆಚ್ಚು ಭಾಷೆಗಳಲ್ಲಿ ಮಾತನಾಡುವ ಸಾಮರ್ಥ್ಯವನ್ನು ವಿಶ್ವದಾದ್ಯಂತ ಪ್ರಶಂಸಿಸಲಾಗುತ್ತದೆ ಮತ್ತು ಗೌರವಿಸಲಾಗುತ್ತದೆ.

ಕೆಲಸದ ನಿಮಿತ್ತ ಮತ್ತು ಆಹಾರದ ಹುಡುಕಾಟದಲ್ಲಿ ಜನರ ವಲಸೆ ಹೆಚ್ಚಾದಂತೆ ವಿಭಿನ್ನ ಭೌಗೋಳಿಕ ಪ್ರದೇಶಗಳಿಂದ ಬಂದಂತಹ ಮಕ್ಕಳು ವಿವಿಧ ಭಾಷೆಗಳನ್ನು ಮಾತನಾಡುವ

ಮೂಲಕ ಒಟ್ಟಿಗೆ ಅಧ್ಯಯನ ಮಾಡುತ್ತಾರೆ. ಶಿಕ್ಷಣ ಹಕ್ಕು ಕಾಯ್ದೆಯ ಅಡಿಯಲ್ಲಿ ಪ್ರತಿಯೊಂದು ಮಗುವು ಶಾಲೆಗೆ ಹೋಗಬೇಕೆಂದು ನಿರೀಕ್ಷಿಸಲಾಗಿದೆ.

ಎಷ್ಟೋ ಸಂದರ್ಭಗಳಲ್ಲಿ ಮಾತೃಭಾಷೆ ಮತ್ತು ಶಾಲೆಯಲ್ಲಿ ಬೋಧಿಸುವ ಭಾಷೆಯ ನಡುವಿನ ವ್ಯತ್ಯಾಸದಿಂದಾಗಿ ಮಕ್ಕಳಿಗೆ ತರಗತಿಯ ಪಾಠವನ್ನು ಕಲಿತು ಅರ್ಥಮಾಡಿಕೊಳ್ಳಲು ಹೆಣಗುವುದನ್ನು ಹಲವಾರು ಬಾರಿ ಗಮನಿಸಲಾಗಿದೆ. ಶಾಲೆಯಲ್ಲಿ ಕಲಿಸುವ ಬೋಧನಾ ಮಾಧ್ಯಮವು, ಮನೆಯಲ್ಲಿ ಮಾತನಾಡುವ ಭಾಷೆಯಂತೆಯೇ ಇದ್ದಾಗ ಮಾತ್ರ ಕಲಿಕೆಯು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಆಗ ಶಾಲೆಯಿಂದ ಹೊರಗುಳಿಯುವ (ಡ್ರಾಪ್ ಔಟ್) ಮಕ್ಕಳ ಸಂಖ್ಯೆಯು ಕ್ಷೀಣಿಸುತ್ತದೆ. ಬೋಧನಾ ಮಾಧ್ಯಮ ಮತ್ತು ಮನೆ ಭಾಷೆಯ ನಡುವೆ ಇರುವ ಅಂತರವನ್ನು ಶಿಕ್ಷಕರು ಕ್ರಮೇಣವಾಗಿ ನಿವಾರಿಸುತ್ತಾ ಬರಬೇಕು. ಮನೆ ಭಾಷೆಯನ್ನು ಗೌರವಿಸಿ ಒಪ್ಪಿಕೊಳ್ಳುವ ಮೂಲಕ ಎರಡನೆಯ ಹಾಗೂ ಮೂರನೆ ಭಾಷೆಯ ಕಲಿಕೆಗೆ ಹೆಚ್ಚು ಅನುಕೂಲವಾಗುವಂತೆ ಒಂದು ಭಾಷೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಕಲಿಸಬೇಕು.

ಪ್ರತಿಯೊಬ್ಬ ವ್ಯಕ್ತಿಯು ಪರಸ್ಪರ ಸಂವಹನ ನಡೆಸುವ ಸಲುವಾಗಿ ಭಾಷೆಯನ್ನು ಬಳಸುತ್ತಾನೆ. ಆದರೆ ಕೇಳಿಸಿಕೊಳ್ಳಲು ಸಾಧ್ಯವಾಗದ ವ್ಯಕ್ತಿಗಳು ತಮ್ಮ ಸಂವಹನಕ್ಕಾಗಿ ಸಂಕೇತ ಭಾಷೆಯನ್ನು ಬಳಸುತ್ತಾರೆ. ಹಾಗೆಯೇ ದೃಷ್ಟಿ ವಿಶೇಷ ಚೇತನರು ಓದಲು ಮತ್ತು ಬರೆಯಲು ಬ್ರೈಲ್ ಲಿಪಿಯನ್ನು ಬಳಸುತ್ತಾರೆ. ಆದ್ದರಿಂದ, ಬಹುಭಾಷಿಕತೆಯ ಮತ್ತೊಂದು ಆಯಾಮವೆಂದರೆ ದೇಶದಲ್ಲಿರುವ ಇತರೇ ಭಾಷೆಯಂತೆಯೇ ಸಂಕೇತ ಭಾಷೆ ಮತ್ತು ಬ್ರೈಲ್ ಅನ್ನು ಸಹ ಒಂದು ಸಂವಹನದ ಮಾಧ್ಯಮವಾಗಿ ಗುರುತಿಸಿ ಗೌರವಿಸುವುದಾಗಿದೆ.

**ಜನಾಂಗೀಯತೆ:** ಜನಾಂಗೀಯತೆಯು ನಿರ್ದಿಷ್ಟ ಭೌಗೋಳಿಕ ಪ್ರದೇಶದ ಜನರ ಸಾಂಸ್ಕೃತಿಕ ಸಂಪ್ರದಾಯಗಳನ್ನು ಹೊಂದಿರುವ ಸಾಮಾಜಿಕ ಗುಂಪಿಗೆ ಸೇರಿರುವುದನ್ನು ಸೂಚಿಸುತ್ತದೆ. ಈ ಅಂಶವು ಪಠ್ಯಪುಸ್ತಕಗಳು, ಪಠ್ಯಕ್ರಮ, ಬೋಧನಾಶಾಸ್ತ್ರ, ಜೊತೆಗೆ ಶಾಲೆಯ ದಿನನಿತ್ಯದ ಕಾರ್ಯಚಟುವಟಿಕೆಗಳ ಮೇಲೆ ಪರಿಣಾಮ ಬೀರುತ್ತದೆ. ಪ್ರತಿಯೊಂದು ಜನಾಂಗೀಯ ಗುಂಪು ಅವರದೆ ಆದ ಪದ್ಧತಿಗಳು, ಕಲೆ ಮತ್ತು ಕಲಾಕೃತಿಗಳು, ಉಡುಗೆ-ತೊಡುಗೆ ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಈ

ಗುಂಪುಗಳಿಂದ ಬಂದಂತಹ ಮಗು ತನ್ನೊಂದಿಗೆ ವೈವಿಧ್ಯಮಯವಾದ, ಸಮೃದ್ಧವಾದ ಅನುಭವವನ್ನು ತರಗತಿಯೊಳಗೆ ತರುತ್ತದೆ. ಜೊತೆಗೆ ಇದು ಸಹಪಾಠಿಗಳ ತಿಳಿವಳಿಕೆಯನ್ನು ಸಹ ಶ್ರೀಮಂತಗೊಳಿಸುತ್ತದೆ. ಇಂತಹ ಸ್ಥಳೀಯ ಪದ್ಧತಿಗಳು ಮತ್ತು ಸಂಪ್ರದಾಯಗಳು ಶಿಕ್ಷಣ ವ್ಯವಸ್ಥೆಯ ಮೇಲೆ ನೇರವಾದ ಪ್ರಭಾವವನ್ನು ಬೀರುತ್ತದೆ. ಪಠ್ಯಪುಸ್ತಕ, ಪಠ್ಯಕ್ರಮ, ಶಾಲಾಕೆಲಸದ ದಿನಗಳು, ರಜಾದಿನಗಳ ವೇಳಾಪಟ್ಟಿ, ಶಾಲೆಯ ಸಮಯ, ಬೋಧನಾ ಮಾಧ್ಯಮ ಇತ್ಯಾದಿಗಳೆಲ್ಲವನ್ನೂ ಜನಾಂಗೀಯತೆ ಪ್ರಭಾವಿಸುತ್ತದೆ. ಪಠ್ಯಕ್ರಮದಲ್ಲಿ ಮತ್ತು ತರಗತಿಯ ದೈನಂದಿನ ದಿನಚರಿಯಲ್ಲಿ ಸಾಂಸ್ಕೃತಿಕ ಕಲೆಗಳು ಮತ್ತು ಕಲಾಕೃತಿಗಳನ್ನು ವ್ಯಾಪಕವಾಗಿ ಸಂಘಟಿಸುವುದು ಕೂಡ ತುಂಬಾ ಮುಖ್ಯ. ಶಾಲೆಗೆ ದಾಖಲಾಗುವ ಮತ್ತು ತನ್ನ ಜನಾಂಗೀಯತೆಯನ್ನು ಅಂಗೀಕರಿಸುವ ಪ್ರತಿ ಮಗುವಿನ ಕಲಿಕೆಯ ಅನುಭವವನ್ನು ಸುಲಭಗೊಳಿಸಲು ಅಗತ್ಯ ಮಾರ್ಗಗಳು ಮತ್ತು ವಿಧಾನಗಳನ್ನು ಶಾಲಾ ಆಡಳಿತ ಮಂಡಳಿಯವರು ಮತ್ತು ಶಿಕ್ಷಕರು ಕಂಡುಕೊಳ್ಳಬೇಕಾಗುತ್ತದೆ.

ತರಗತಿಯಲ್ಲಿನ ವಿವಿಧ ಜನಾಂಗೀಯ ಗುಂಪುಗಳ ಕುರಿತು ಮಕ್ಕಳಲ್ಲಿ ತಿಳಿವಳಿಕೆ ಮೂಡಿಸಲು, ಶಿಕ್ಷಕರು ಶಾಲೆಯಲ್ಲಿ ವಿಶೇಷ ಹಬ್ಬಗಳು, ಆಹಾರದ ದಿನ, ಪೋಷಾಕುಗಳ ದಿನ, ಕಥಾ ಕಾಲಕ್ಷೇಪ, ಹೀಗೆ ವಿವಿಧ ರೀತಿಯ ವಿಶೇಷ ದಿನಗಳನ್ನು ಸಂಘಟಿಸಬಹುದು. ಈ ದಿನಗಳ ಆಚರಣೆಗಾಗಿ ಪೋಷಕರನ್ನು ಶಾಲೆಗೆ ಆಹ್ವಾನಿಸಬಹುದು ಮತ್ತು ಚಟುವಟಿಕೆ ಹಾಳೆಯನ್ನು ನೀಡಬಹುದು.

**ಲಿಂಗ:** ಸಾಮಾನ್ಯವಾಗಿ ಜನರು ಲಿಂಗ ಎಂಬುದನ್ನು ಗಂಡು ಮತ್ತು ಹೆಣ್ಣು ಎಂದು ಅರ್ಥೈಸಿಕೊಂಡಿದ್ದಾರೆ. ಲಿಂಗವನ್ನು ಒಂದು ಗಂಡಿನ ಅಥವಾ ಹೆಣ್ಣಿನ ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಎಷ್ಟೋ ಸಂದರ್ಭಗಳಲ್ಲಿ 'ಕಾಮ'ವನ್ನು ಲಿಂಗದೊಂದಿಗೆ ಹೋಲಿಸುವುದುಂಟು, ಲಿಂಗಕ್ಕೆ ಪರ್ಯಾಯ ಪದವಾಗಿ ಬಳಸುವುದುಂಟು. ಕಾಮ ಶಾರೀರಿಕ ಗುಣಲಕ್ಷಣವುಳ್ಳ ಪರಿಕಲ್ಪನೆಯಾದರೆ ಲಿಂಗ ಸಾಮಾಜಿಕ ಗುಣಲಕ್ಷಣವುಳ್ಳ ಪರಿಕಲ್ಪನೆಯಾಗಿದೆ. ಕಾಮದ ಶಾರೀರಿಕ ಗುಣಲಕ್ಷಣಗಳನ್ನು ವಂಶವಾಹಿಗಳು, ಹಾರ್ಮೋನುಗಳು ಮತ್ತು ಸ್ತ್ರೀಪುರುಷರ ಜನನಾಂಗಗಳು ನಿರ್ಧರಿಸುತ್ತವೆ.

ಲಿಂಗವನ್ನು ಸಾಮಾಜಿಕ ಸಾಂಸ್ಕೃತಿಕ ಪರಿಭಾಷೆಯಲ್ಲಿ ಅರ್ಥ ಮಾಡಿಕೊಳ್ಳುವುದೆಂದರೆ, ಸಮಾಜವು ಗಂಡು ಅಥವಾ ಹೆಣ್ಣಿನಲ್ಲಿ ನಿರೀಕ್ಷಿಸುವ ಸಾಮಾಜಿಕ ಗುಣಲಕ್ಷಣ, ವರ್ತನೆಗಳನನ್ನು ಅರ್ಥ ಮಾಡಿಕೊಳ್ಳುವುದಾಗಿದೆ. ಮಕ್ಕಳು ಸಾಮಾನ್ಯವಾಗಿ ಆಟಿಕೆಯೊಂದಿಗೆ ಆಡುವಾಗ ಅವರ ಆಟಿಕೆಯ ಆದ್ಯತೆಗಳು ಹೆಚ್ಚಾಗಿ ಮಕ್ಕಳ ತಂದೆ-ತಾಯಿಯರ ಲಿಂಗ-ಮಾದರಿಗೆ ಗಮನಾರ್ಹವಾಗಿ ಸಂಬಂಧಿಸಿರುತ್ತದೆ, ಉದಾಹರಣೆಗೆ ಹುಡುಗಿಯರು ಹೆಚ್ಚಾಗಿ ಗೊಂಬೆಗಳೊಂದಿಗೆ ಆಟವಾಡಿದರೆ, ಹುಡುಗರು ಹೆಚ್ಚು ಕ್ರೀಡೆಗಳಲ್ಲಿ ತೊಡಗಿಕೊಳ್ಳುತ್ತಾರೆ. ಭಾರತೀಯ ಸಂದರ್ಭದಲ್ಲಿ ನೋಡುವುದಾದರೆ, ತಂದೆ ಮತ್ತು ತಾಯಿ ಇಬ್ಬರೂ ತಮ್ಮ ಮಕ್ಕಳಿಗೆ ಸಾಂಪ್ರದಾಯಿಕ ಲಿಂಗ ಪಾತ್ರಗಳನ್ನು ಪ್ರೋತ್ಸಾಹಿಸುತ್ತಾರೆ.

ಮೂಲ ಲಿಂಗ ಅಸ್ಮಿತೆಯು ಸಾಮಾನ್ಯವಾಗಿ ಮೂರು ವರ್ಷಗಳ ವಯಸ್ಸಿನಲ್ಲಿ ರೂಪುಗೊಳ್ಳುತ್ತದೆ. ಮೂರು ವರ್ಷ ವಯಸ್ಸಿನ ನಂತರದ ದಿನಗಳಲ್ಲಿ ಅದು ಬದಲಾಗುವುದು ಬಹಳ ಕಷ್ಟ, ಮತ್ತು ಅದನ್ನು ಬದಲಾಯಿಸುವ ಪ್ರಯತ್ನವು ಸಹ ಕಷ್ಟಕರ. ಜೈವಿಕ ಮತ್ತು ಸಾಮಾಜಿಕ ಅಂಶಗಳೆರಡೂ ಅದನ್ನು ಪ್ರಭಾವಿಸುತ್ತದೆ.

ಹುಡುಗಿಯರು ಮತ್ತು ಹುಡುಗರನ್ನು ನಡೆಸಿಕೊಳ್ಳುವುದರಲ್ಲಿ ಕಾಣಿಸುವ ವ್ಯತ್ಯಾಸಗಳು, ಸಮಾಜದಲ್ಲಿ ಅವರ ನಿರೀಕ್ಷಿತ ಪಾತ್ರಗಳ ಬಗ್ಗೆ ಅವರನ್ನು ಸಂವೇದನಾಶೀಲರಾಗುವಂತೆ ಮಾಡುತ್ತದೆ. ಈ ನಿರೀಕ್ಷಿತ ಪಾತ್ರಗಳು ಲಿಂಗಗಳ ನಡುವೆ ಸಮಾನ ಅವಕಾಶಗಳನ್ನು ಉತ್ತೇಜಿಸದೆ ಇರಬಹುದು. ತರಗತಿಯಲ್ಲಿ ಹುಡುಗಿಯರ ಹಾಜರಿ ಅಥವಾ ಗೈರುಹಾಜರಿಯು ಬೋಧನಾ ಕಲಿಕಾ ಪ್ರಕ್ರಿಯೆಯ ಮೇಲೆ ಪರಿಣಾಮ ಬೀರುವುದಲ್ಲದೇ ಭೌತಿಕ ಮೂಲಸೌಕರ್ಯಗಳ ವಿಷಯದಲ್ಲಿ ಹೆಣ್ಣುಮಕ್ಕಳಿಗಾಗಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡುವಂತೆ ಆಡಳಿತ ವರ್ಗದವರಿಗೆ ಬೇಡಿಕೆಯನ್ನು ಇಡುತ್ತದೆ. ಇದರ ಪರಿಣಾಮವಾಗಿ ವ್ಯಕ್ತವಾಗುವ ಒಂದು ಪ್ರಮುಖ ಅಂಶವೆಂದರೆ ಹೆಣ್ಣುಮಕ್ಕಳಿಗಾಗಿ ಪ್ರತ್ಯೇಕ ಶೌಚಾಲಯದ ನಿರ್ಮಾಣ ಹಾಗೂ ಲಿಂಗ ಸಂವೇದನೆಗೆ ಸಂಬಂಧಿಸಿದಂತೆ ಮಾನವ ಸಂಪನ್ಮೂಲಗಳಿಗೆ ವಿಶೇಷ ತರಬೇತಿ. ಎರಡೂ ಲಿಂಗಗಳ ಸಮಾನ ಭಾಗವಹಿಸುವಿಕೆಯನ್ನು ಅನುಮತಿಸುವ ಕಲಿಕಾ ಸಂದರ್ಭಗಳನ್ನು ರಚಿಸುವುದು ಬೋಧನಾ ಕಲಿಕಾ ಪ್ರಕ್ರಿಯೆಯ ಅಪೇಕ್ಷಿತ ಬದಲಾವಣೆಗಳಲ್ಲಿ ಒಂದಾಗಿದೆ. ಅದೇ ರೀತಿ ಶಾಲಾಪೂರ್ವ ಶಿಕ್ಷಣ ಕೇಂದ್ರದಲ್ಲಿ (ಇಸಿಸಿಇ) ಮಕ್ಕಳನ್ನು ದೈಹಿಕವಾಗಿ

ಕ್ರಿಯಾಶೀಲರಾಗುವಂತೆ ಪ್ರೋತ್ಸಾಹಿಸಲು ಹೆಣ್ಣುಮಕ್ಕಳನ್ನು ಓಟ, ಹತ್ತುವುದು, ಬ್ಯಾಟ್ ಮತ್ತು ಬಾಲ್ , ಫುಟ್ ಬಾಲ್ ಇತ್ಯಾದಿ ಆಟದ ಚಟುವಟಿಕೆಗಳಲ್ಲಿ ಹುಡುಗಿಯರು ಸಮಾನವಾಗಿ ಭಾಗವಹಿಸುವಂತೆ ಶಿಕ್ಷಕರು ಕಾಳಜಿ ವಹಿಸಬೇಕು. ಅದೇ ರೀತಿ ಹುಡುಗರು ಗೊಂಬೆಗಳು, ಅಡುಗೆ ಸಾಮಗ್ರಿಗಳು, ಮತ್ತು ಗೊಂಬೆ ಮನೆಗಳೊಂದಿಗೆ ಆಡುವುದನ್ನು ಸಹ ಶಿಕ್ಷಕರು ಪ್ರೋತ್ಸಾಹಿಸಬೇಕು.

ಸಮಾಜದ ಅಂಚಿನಲ್ಲಿರುವ ವರ್ಗಗಳಲ್ಲಿನ ಮತ್ತು ಗ್ರಾಮೀಣ ಪ್ರದೇಶದಲ್ಲಿನ ಮಕ್ಕಳು, ವಿಶೇಷವಾಗಿ ಹೆಣ್ಣುಮಕ್ಕಳು, ಶಾಲೆಯಿಂದ ಹೊರಗುಳಿಯುವ (ಡ್ರಾಪ್ಔಟ್) ಪ್ರಕರಣಗಳು ಆತಂಕಕಾರಿಯಾಗಿ ಹೆಚ್ಚುತ್ತಲೇ ಇವೆ. ಹೆಣ್ಣುಮಗುವಿಗೆ ಶಾಲೆ ಸುರಕ್ಷಿತ ಮತ್ತು ಪ್ರೀತಿಯ ಭಾವನೆ ನೀಡಬೇಕಾಗುತ್ತದೆ. ಒಂದು ವೇಳೆ ಹುಡುಗಿಯು ವಿಶೇಷ ಚೇತನಳಾಗಿದ್ದರೆ ಅಥವಾ ಸವಾಲುಗಳನ್ನು ಎದುರಿಸುತ್ತಿದ್ದರೆ ಅಥವಾ ಹಿಂದುಳಿದ ಅಥವಾ ದುರ್ಬಲ ವರ್ಗಕ್ಕೆ ಸೇರಿದವಳಾಗಿದ್ದರೆ, ಅವಳು ದುಪ್ಪಟ್ಟು ಅಥವಾ ಮುಪ್ಪಟ್ಟು ತಾರತಮ್ಯವನ್ನು ಎದುರಿಸಬೇಕಾದ ಪರಿಸ್ಥಿತಿ ಇದೆ. ಮೊದಲನೆಯದಾಗಿ ಅವಳು ಹುಡುಗಿ ಎಂಬ ಕಾರಣದಿಂದಾಗಿ, ಎರಡನೆಯದಾಗಿ ಅವಳ ಅಂಗವೈಕಲ್ಯ ಅಥವಾ ಸವಾಲು ಮತ್ತು ಕೊನೆಯದಾಗಿ ಅವಳು ಹಿಂದುಳಿದ ಅಥವಾ ದುರ್ಬಲ ಸಮುದಾಯದಲ್ಲಿ ಹುಟ್ಟಿರುವ ಕಾರಣದಿಂದಾಗಿ ಪರಿಸ್ಥಿತಿಯು ಮತ್ತಷ್ಟು ಬಿಗಡಾಯಿಸುತ್ತದೆ.

**ಸಮಾಜೋ-ಆರ್ಥಿಕ ಸ್ಥಿತಿ**

ಇದು ತರಗತಿಯ ವೈವಿಧ್ಯಕ್ಕೆ ಪ್ರಮುಖ ಕಾರಣಗಳಲ್ಲೊಂದು. ಕಡಿಮೆ ಅಥವಾ ಹೆಚ್ಚಿನ ಸಮಾಜೋ-ಆರ್ಥಿಕ ಸ್ಥಿತಿಯ ಎಲ್ಲಾ ಗುಂಪುಗಳಿಗೆ ಪಠ್ಯಪುಸ್ತಕಗಳು, ಪಠ್ಯಕ್ರಮ ಮತ್ತು ತರಗತಿಯ ಚಟುವಟಿಕೆಗಳಲ್ಲಿ ಸೂಕ್ತವಾದ ಅವಕಾಶವನ್ನು ಒದಗಿಸಬೇಕು. ಸಮಾಜೋ-ಆರ್ಥಿಕ ಹಿನ್ನೆಲೆಯನ್ನು ಗಣನೆಗೆ ತೆಗೆದುಕೊಳ್ಳದೆ ಶಾಲೆಯಲ್ಲಿರುವ ಪ್ರತಿಯೊಂದು ಮಗುವನ್ನು ಸಮಾನವಾಗಿ ಪರಿಗಣಿಸಬೇಕು. ಶಾಲೆಯ ಪ್ರತಿಯೊಬ್ಬರಿಗೂ ಸಮವಸ್ತ್ರದ ಪರಿಕಲ್ಪನೆಯನ್ನು ಬಹುಶಃ ಈ ತಾತ್ವಿಕ ಕಲ್ಪನೆಯೊಂದಿಗೆ ಪ್ರಾರಂಭಿಸಿರಬಹುದು.

ಮಕ್ಕಳಿಗೆ ಯಾವುದೇ ಸಮವಸ್ತ್ರ ನಿಗದಿಪಡಿಸಿರದ, ಸಮವಸ್ತ್ರವನ್ನು ನಿರೀಕ್ಷಿಸದ ಇಸಿಸಿಇ ಕೇಂದ್ರಗಳಲ್ಲಿ ಈ ಸಮಾಜೋ-ಆರ್ಥಿಕ ಸ್ಥಿತಿ ಢಾಳಾಗಿ ಕಾಣಿಸುತ್ತದೆ. ಮಕ್ಕಳು ಧರಿಸುವ ಬಟ್ಟೆಗಳಲ್ಲಿನ ವೈವಿಧ್ಯವು ಅವರ ಕುಟುಂಬದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯ ಬಗ್ಗೆ

ಸಾಕಷ್ಟು ಸೂಚನೆ ನೀಡುತ್ತದೆ. ಮಕ್ಕಳು ಉಪಯೋಗಿಸುವ ಸ್ಟೇಷನರಿ (ಲೇಖನ ಸಾಮಗ್ರಿ) (ಜ್ಯಾಮಿತಿ ಬಾಕ್ಸ್, ಊಟದ ಡಬ್ಬಿ, ಪೆನ್ಸಿಲ್, ಕ್ರಯೋನ್ ಗಳು ಇತ್ಯಾದಿ) ಮತ್ತು ಶಾಲಾ ಬ್ಯಾಗ್‌ಗಳು ಇವೆಲ್ಲವೂ ಸಹ ವೈವಿಧ್ಯವನ್ನು ಎತ್ತಿ ಹಿಡಿಯುತ್ತವೆ. ಈ ತೆರನಾದ ಸಮಾಜೋ-ಆರ್ಥಿಕ ಸ್ಥಿತಿಯ ಕಾರಣದಿಂದಾಗಿ ಉಂಟಾಗುವ ವೈವಿಧ್ಯವನ್ನು ಬೋಧನಾ ಕಲಿಕಾ ಸಂಪನ್ಮೂಲವಾಗಿಯೂ ಬಳಸಿಕೊಳ್ಳಬಹುದಾಗಿದೆ. ಹೇಗೆಂದರೆ ತರಗತಿಯ ಪ್ರತಿ ಮಗುವು ತಮ್ಮ ಸ್ವಂತ ಅನುಭವಗಳನ್ನು ಹೊಂದಿರುವುದರಿಂದ ಅದನ್ನು ಇತರೆ ಮಕ್ಕಳೊಂದಿಗೆ ಹಂಚಿಕೊಳ್ಳಬಹುದು ಹಾಗು ಬೋಧನಾ ಕಲಿಕೆಗೂ ಸಹ ಬಳಸಬಹುದು.

**ಪುಸ್ತಕದ ಪಠ್ಯದಲ್ಲಿನ ಪ್ರಶ್ನೆಗಳು: 20.1**

ಕೆಳಗಿನವುಗಳನ್ನು ಒಂದೇ ವಾಕ್ಯದಲ್ಲಿ ವಿವರಿಸಿ:

- **(a)** ಜಾತಿ
- **(b)** ಜನಾಂಗ
- **(c)** ಬಹುಭಾಷಿಕತೆ
- **(d)** ಜನಾಂಗೀಯತೆ
- **(e)** ಲಿಂಗ

**ದೈಹಿಕ ನ್ಯೂನತೆಗಳು**: ದೈಹಿಕ ನ್ಯೂನತೆಗಳು ದೈಹಿಕ ಚಟುವಟಿಕೆಗಳ ಕೆಲವು ನಿರ್ಬಂಧಗಳಿಗೆ ಕಾರಣವಾಗುವ ದುರ್ಬಲತೆಗಳಿಗೆ ಸಂಬಂಧಿಸಿವೆ. ಈ ಕಾರಣಕ್ಕಾಗಿ ವಿಶೇಷಚೇತನ ಮಕ್ಕಳು ಶಾಲೆಯಲ್ಲಿನ ಇತರೆ ಮಕ್ಕಳೊಂದಿಗೆ ಬೋಧನಾ-ಕಲಿಕಾ ಚಟುವಟಿಕೆಗಳಲ್ಲಿ ತೊಡಗದಂತೆ ಮಾಡುವುದು ಸೂಕ್ತ ಕ್ರಮವಲ್ಲ. ತರಗತಿಯಲ್ಲಿ ವಿಶೇಷಚೇತನ ಮಕ್ಕಳ ಇರುವಿಕೆ ಶಾಲಾ ಶಿಕ್ಷಕರಿಗೆ ಮತ್ತು ಆಡಳಿತ ವರ್ಗದವರಿಗೆ ವೃತ್ತಿಪರವಾಗಿ ಬೆಳವಣಿಗೆ ಹೊಂದಲು ಅವಕಾಶವನ್ನು ಒದಗಿಸುತ್ತದೆ.

ಬೋಧನಾಶಾಸ್ತ್ರದಲ್ಲಿ ಸ್ವಲ್ಪಮಟ್ಟಿನ ಬದಲಾವಣೆ ಮಾಡುವುದರ ಮೂಲಕ ವಿಶೇಷಚೇತನ ಮಕ್ಕಳನ್ನು ತರಗತಿಯ ಚಟುವಟಿಕೆಗಳಲ್ಲಿ ಸುಲಭವಾಗಿ ತೊಡಗಿಸಿಕೊಳ್ಳಬಹುದು. ಉದಾಹರಣೆಗೆ, ಪದ್ಯ ವಾಚನವನ್ನು ಹೇಳಿಕೊಡುವ ಸಂದರ್ಭದಲ್ಲಿ ಶಿಕ್ಷಕರು ಸಂಕೇತ ಭಾಷೆಯನ್ನು ಉಪಯೋಗಿಸಬಲ್ಲರಾದಲ್ಲಿ ಶ್ರವಣದೋಷವಿರುವ ಮಕ್ಕಳನ್ನು ಈ ಚಟುವಟಿಕೆಯಲ್ಲಿ ಸೇರಿಸಿಕೊಳ್ಳಬಹುದು. ಈ ರೀತಿ ಮಾಡುವುದರಿಂದ ಮಕ್ಕಳಿಗೆ ಲಯದ ಜ್ಞಾನ ಹೊಂದಲು ಸಾಧ್ಯವಾಗುತ್ತದೆ ಮತ್ತು

ಭಾಗವಹಿಸುವಿಕೆಯನ್ನು ಮತ್ತಷ್ಟು ಉತ್ತೇಜಿಸಿದಂತಾಗುತ್ತದೆ. ದೃಷ್ಟಿದೋಷವುಳ್ಳ ಮಕ್ಕಳನ್ನು ಬಣ್ಣ ಹಚ್ಚುವ ಚಟುವಟಿಕೆಗಳಲ್ಲಿ ಸುಲಭವಾಗಿ ತೊಡಗಿಸಿಕೊಳ್ಳಬಹುದು. ಅಂದರೆ ಮಗುವಿಗೆ ಕಡ್ಡಿಗಳು ಅಥವಾ ದಾರವನ್ನು ಬಳಸಿ ಮಾಡಿರುವ ಸ್ಪರ್ಶದ ಮಿತಿಯನ್ನು ಹೊಂದಿರುವ ಬಣ್ಣ ಹಚ್ಚುವ ಹಾಳೆಯನ್ನು ನೀಡುವ ಮೂಲಕ ಅಥವಾ ನಿರ್ದಿಷ್ಟ ಆಕಾರದಲ್ಲಿರುವ ವಸ್ತುವನ್ನು (ಉದಾ: ವೃತ್ತಾಕಾರಕ್ಕೆ ಬಳೆಯನ್ನು ಬಳಸುವುದು) ಹಾಳೆಯ ಮೇಲೆ ಅಂಟಿಸುವ ಮೂಲಕ.

ಸಾಮಾನ್ಯ ಪದಗಳಿಗೆ ಅಂದರೆ 'ಇಲ್ಲ', 'ಹೌದು', 'ನನಗೆ ಬೇಕು', 'ನನಗೆ ಇಷ್ಟ', 'ನನಗೆ ಅಗತ್ಯವಿದೆ' ಇತ್ಯಾದಿಗಳ ಸಂವಹನಕ್ಕೆ ಮನೆಯಲ್ಲಿ ಬಳಸುವ ಚಿಹ್ನೆಗಳನ್ನು ಶಿಕ್ಷಕರು ಪೋಷಕರಿಂದ ಕಲಿಯಬಹುದು. ತರಗತಿಯಲ್ಲಿ ಮಗು ಶಿಕ್ಷಕರೊಂದಿಗೆ ಮತ್ತು ಸ್ನೇಹಿತರೊಂದಿಗೆ ಸಂವಹನ ನಡೆಸುವಾಗ ಈ ಚಿಹ್ನೆಗಳು ಇರುವಂತಹ ಮಿಂಚುಪಟ್ಟಿಗಳು (ಫ್ಲಾಶ್‌ಕಾರ್ಡ್‌ಗಳು) ಮತ್ತು ಚಿತ್ರಗಳನ್ನು ಮಗು ಬಳಸಬಹುದು. ಸಂವಹನವನ್ನು ಇನ್ನಷ್ಟು ಸುಲಭಗೊಳಿಸಲು ಸಂಕೇತ ಭಾಷಾತಜ್ಞರು ಅಥವಾ ವಿಶೇಷ ಶಿಕ್ಷಕರನ್ನು ಸಹ ಸಂಪರ್ಕಿಸಬಹುದು.

ವಿಶೇಷಚೇತನ ಮಕ್ಕಳೊಂದಿಗೆ ವ್ಯವಹರಿಸುವಾಗ, ನಮ್ಮ ಮಾತುಗಳು ಅಥವಾ ಅವರೊಂದಿಗೆ ಹೇಗೆ ಮಾತನಾಡಬೇಕು ಎಂಬುದು ಅತ್ಯಂತ ಮುಖ್ಯವಾಗಿರುತ್ತದೆ. ಅಂಗವಿಕಲತೆಯ ಪ್ರಕಾರಕ್ಕೆ ಅನುಗುಣವಾಗಿ ಮೊದಲು 'ಮಗು' ಎಂಬ ಪದವನ್ನು ಬಳಸಬೇಕು ಎಂದು ಯಾವಾಗಲೂ ಸಲಹೆ ನೀಡಲಾಗುತ್ತದೆ. ಉದಾಹರಣೆಗೆ, 'ಆಟಿಸಂ ಮಗು' ಎಂದು ಹೇಳುವ ಬದಲಾಗಿ 'ಆಟಿಸಂ ಹೊಂದಿರುವ ಮಗು' ಎಂದು ಹೇಳುವುದು ಸೂಕ್ತ. ಅಂತಹ ಕೆಲವು ಸಲಹೆಗಳನ್ನು ಈ ಕೆಳಗೆ ಪಟ್ಟಿ ಮಾಡಲಾಗಿದೆ.

ಅಂಗವಿಕಲ ಮಗುವಿನ ಬದಲಾಗಿ ಅಂಗವೈಕಲ್ಯ ಹೊಂದಿರುವ ಮಗು ಎಂದು **ಬಳಸಿ**

ಬುದ್ದಿಮಾಂದ್ಯ, ಮಾನಸಿಕ ಕುಂಠಿತ, ಮೂರ್ಖ, ದಡ್ಡ, ಮಂದಬುದ್ದಿಯುಳ್ಳವ ಇತ್ಯಾದಿಗಳ ಬದಲಿಗೆ ಬೌದ್ಧಿಕ ಅಸಾಮರ್ಥ್ಯ ಹೊಂದಿರುವ ಮಗು ಎಂದು **ಬಳಸಿ**

ವ್ಹೀಲ್ ಚೇರ್ ಗೆ ಸೀಮಿತವಾಗಿರುವ ಮಗು, ವ್ಹೀಲ್ ಚೇರ್ ಗೆ ನಿರ್ಬಂಧಿತವಾದ ಮಗು ಎಂದು ಹೇಳುವ ಬದಲಾಗಿ ವ್ಹೀಲ್ ಚೇರ್ ನ್ನು ಬಳಸುವ ಮಗು ಎಂದು **ಬಳಸಿ**

ದೃಷ್ಟಿಹೀನ ಮಕ್ಕಳ ಬದಲಾಗಿ ದೃಷ್ಟಿ ದೋಷವಿರುವ ಮಗು ಎಂದು **ಬಳಸಿ**

**ಧಾರ್ಮಿಕ ನಂಬಿಕೆ**: ಧಾರ್ಮಿಕ ನಂಬಿಕೆ ಎಂಬುದು ದೇವರು, ಮಾನವಕುಲದ ಸೃಷ್ಟಿ, ಧರ್ಮಾಚರಣೆಗಳು, ಹಬ್ಬಗಳು ಇತ್ಯಾದಿಗಳಿಗೆ ಸಂಬಂಧಿಸಿದ ನಂಬಿಕೆಗಳಿಗೆ ಸಂಬಂಧಿಸಿದ್ದಾಗಿವೆ. ಎಲ್ಲಾ ಧರ್ಮಗಳೂ ಸಮಾನ ಹಕ್ಕುಗಳನ್ನು ಹೊಂದಿವೆ. ಹಿಂದೂ ಧರ್ಮ ಇಸ್ಲಾಂ, ಕ್ರಿಶ್ಚಿಯನ್ ಧರ್ಮ, ಸಿಖ್ ಧರ್ಮ, ಜೈನ ಧರ್ಮ, ಬೌದ್ಧ ಧರ್ಮ, ಝೋರಾಸ್ಟ್ರಿಯನ್ ಧರ್ಮ ಇತ್ಯಾದಿ ಹಲವಾರು ಧರ್ಮಗಳಿಗೆ ನೆಲೆಯಾಗಿರುವ ಪ್ರಪಂಚದಲ್ಲೇ ಏಕೈಕ ದೇಶವೆಂದರೆ ಬಹುಶಃ ಭಾರತವೊಂದೇ ಎಂದು ಹೇಳಬಹುದು. ಹಲವಾರು ಜನರಿಗೆ ತಮ್ಮ ದೈನಂದಿನ ಜೀವನದಲ್ಲಿ ಧರ್ಮವು ಒಂದು ಮುಖ್ಯ ಅಂಶವಾಗಿದೆ. ಧಾರ್ಮಿಕ ನಂಬಿಕೆಗಳು, ಮೌಲ್ಯಗಳು ಮತ್ತು ಪದ್ಧತಿಗಳು ಮಗುವಿನ ಕುಟುಂಬದಿಂದಲೇ ರೂಪುಗೊಳ್ಳುತ್ತವೆ. ಮಕ್ಕಳು ತಮ್ಮ ಮನೆಗಳಿಂದ ಹಾಗೂ ಸಮುದಾಯದಿಂದ ತಮ್ಮದೇ ಆದ ಧಾರ್ಮಿಕ ಆಚರಣೆಗಳ ಅನುಭವಗಳನ್ನು ಶಾಲಾ ತರಗತಿಗೆ ಕೊಂಡೊಯ್ಯುತ್ತಾರೆ. ಈ ಅನುಭವಗಳ ವೈವಿಧ್ಯವನ್ನು ಗುರುತಿಸುವುದು ಮಾತ್ರವಲ್ಲ, ಬದಲಾಗಿ ಇಂತಹ ವೈವಿಧ್ಯಗಳನ್ನು ಹೊತ್ತುತರುವ ಮಕ್ಕಳನ್ನು ಪ್ರೋತ್ಸಾಹಿಸಲೂ ಬೇಕು. ಪ್ರತಿಯೊಂದು ಧರ್ಮವೂ ಕೂಡ ತನ್ನದೇ ಆದಂತಹ ಹಬ್ಬಗಳನ್ನು ಹೊಂದಿರುತ್ತದೆ. ಹಬ್ಬಗಳಲ್ಲಿ ಅದರದೇ ಆದ ವಿಶೇಷ ಆಚರಣೆಗಳು ಹಾಗೂ ಅಲಂಕಾರಗಳನ್ನು ಹೊಂದಿದ್ದು ಅವುಗಳನ್ನು ಗುರುತಿಸಬಹುದಾಗಿದೆ. ಧಾರ್ಮಿಕ ನಂಬಿಕೆಗಳಲ್ಲಿ ಇರುವ ವೈವಿಧ್ಯತೆದಿಂದಾಗಿ ಜಾತ್ಯಾತೀತತೆಯ ಆಲೋಚನೆಗಳನ್ನು ಉತ್ತೇಜಿಸುವ ಹಾಗೂ ಎಲ್ಲಾ ಧರ್ಮಗಳು ಸಮಾನ ಹಕ್ಕನ್ನು ಹೊಂದಿವೆ ಜೊತೆಗೆ ಅವು ಗೌರವದಿಂದ ನಡೆಸಿಕೊಳ್ಳುವ ಮಾನ್ಯತೆಯನ್ನು ಪಡೆದಿದೆ ಎಂದು ಮಕ್ಕಳಿಗೆ ಕಲಿಸಲು ಶಿಕ್ಷಕರಿಗೆ ಇದೊಂದು ಒಳ್ಳೆಯ ಅವಕಾಶ ಲಭಿಸಿದಂತಾಗುತ್ತದೆ. ಚಿತ್ರಗಳು, ಪದ್ಯಗಳು ಅಥವಾ ಕಥೆಗಳ ಮೂಲಕ ಅಥವಾ ಅವರದೇ ಮಾತುಗಳ ಮೂಲಕ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶವನ್ನು ಒದಗಿಸಬೇಕು. ಹಾಗೆಯೇ ವಿವಿಧ ಧರ್ಮಗಳಲ್ಲಿ ಆಚರಿಸುವಂತಹ ಪ್ರಮುಖ ಹಬ್ಬಗಳನ್ನು ಕುರಿತು ತರಗತಿಯಲ್ಲಿ ಚರ್ಚಿಸಬಹುದು;

- ಯಾವಾಗ ಆಚರಿಸುವುದು
- ಹೇಗೆ ಆಚರಿಸುವುದು
- ವಿಶೇಷ ಆಹಾರವನ್ನು ತಯಾರಿಸುವುದರ ಬಗ್ಗೆ
- ಆಚರಣೆಯ ಸಂದರ್ಭಗಳಲ್ಲಿ ಅವರ ಪಾತ್ರವೇನು
- ಆಚರಣೆಗಳ ಸಮಯದಲ್ಲಿ ಅವರಿಗೆ ಹೇಗೆ ಅನಿಸುತ್ತದೆ

| **ಚಟುವಟಿಕೆ 20.2**<br>ನಿಮ್ಮ ನೆರೆಹೊರೆಯ ವೈವಿಧ್ಯದ ಸಂಕ್ಷಿಪ್ತ ಚಿತ್ರಣವನ್ನು ರಚಿಸಿ. ಅದನ್ನು ರಚಿಸಲು ಕೆಳಗಿನ ಕೋಷ್ಟಕ ಉಪಯುಕ್ತವಾಗಬಹುದು. | |
|---|---|
| ವೈವಿಧ್ಯದ ಅಂಶಗಳು | ಕುಟುಂಬಗಳ ಸಂಖ್ಯೆ |
| ಜನಾಂಗ | |
| ಜನಾಂಗೀಯತೆ | |
| ಲಿಂಗ | |
| ಧರ್ಮ | |

**ಗ್ರಹಿಕೆಯ ವೈಖರಿಗಳು:** ಶೈಕ್ಷಣಿಕ ಮಧ್ಯಸ್ಥಿಕೆಗಳು ಮತ್ತು ಕಲಿಕೆಯನ್ನು ಸಂಯೋಜಿಸುವಲ್ಲಿ ಮಕ್ಕಳು ಪ್ರತಿಸ್ಪಂದಿಸುವ ರೀತಿಯಲ್ಲಿನ ವ್ಯತ್ಯಾಸಗಳನ್ನು ಇದು ಸೂಚಿಸುತ್ತದೆ. ಪ್ರತೀ ಮಗುವು ವಿಶಿಷ್ಟ ಮತ್ತು ವಿಭಿನ್ನ. ಮಗುವಿನ ವ್ಯಕ್ತಿತ್ವ ಮತ್ತು ಕಲಿಕಾ ಸಂಪನ್ಮೂಲಗಳ ಬಳಕೆಗೆ ಅನುಗುಣವಾಗಿ ಪ್ರತಿಯೊಂದು ಮಗುವಿಗೂ ತನ್ನದೇ ಆದ ವಿಶೇಷ ಕಲಿಕಾ ವೈಶಿಷ್ಟ್ಯವನ್ನು ಹೊಂದಿರುತ್ತದೆ. ಗ್ರಹಿಕೆಯ ವೈವಿಧ್ಯಮಯ ವೈಖರಿಗಳು ತರಗತಿಯ ವೈವಿಧ್ಯವನ್ನೂ ಹೆಚ್ಚಿಸುತ್ತದೆ ಮತ್ತು ಇದರಿಂದ ಶಿಕ್ಷಕರಲ್ಲಿ ಮತ್ತು ಶೈಕ್ಷಣಿಕ ಆಡಳಿತವರ್ಗದಲ್ಲಿ ನೇರವಾದ ಪರಿಣಾಮಮ ಉಂಟಾಗುತ್ತದೆ. ತರಗತಿಯ ಶಿಕ್ಷಕರು ತರಗತಿಯಲ್ಲಿರುವ ಎಲ್ಲಾ ಮಕ್ಕಳ ಕಲಿಕೆಗಾಗಿ ವೈವಿಧ್ಯಮಯ ಬೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ವಿಭಿನ್ನ ಕಲಿಕಾ ವೈಖರಿಗಳನ್ನು ಬಳಸಲು ಪರಿಕಲ್ಪನೆಗಳನ್ನು ಬೋಧಿಸುವುದರಿಂದ ಇಡೀ ತರಗತಿಗೆ ಅನುಕೂಲವಾಗುತ್ತದೆ. ಒಂದೇ ವಿಷಯವನ್ನು ಬೋಧಿಸಲು ವಿವಿಧ ವಿಧಾನಗಳನ್ನು ಬಳಸಬೇಕಾಗುತ್ತದೆ. ಇದರಿಂದ ಕಲಿಕೆ ಪ್ರವರ್ಧನಗೊಳ್ಳುತ್ತದೆ, ಕಲಿಕೆಯೂ ಸುಧಾರಿಸುತ್ತದೆ. ಉದಾಹರಣೆಗೆ, ಕಥೆ ಹೇಳುವಾಗ ಶಿಕ್ಷಕರು ಕಥೆ ಪುಸ್ತಕವನ್ನು ಬಳಸಬಹುದು. ಇದರಿಂದ ಕೇಳಿ ಕಲಿಯುವವರಿಗೂ ಹಾಗೆಯೇ ಓದಿ ಕಲಿಯುವವರಿಗೂ ಅನುಕೂಲವಾಗುತ್ತದೆ. ಅಂದರೆ ಕೇಳಿ ಕಲಿಯುವವರು ಕಥೆಯನ್ನು ಕೇಳುತ್ತಾ ಸಂತೋಷಪಟ್ಟರೆ, ನೋಡಿ ಕಲಿಯುವವರು ಪುಸ್ತಕದಲ್ಲಿನ ಪದಗಳು ಮತ್ತು ಚಿತ್ರಗಳೊಂದಿಗೆ ವಿವರಣೆಯನ್ನು ಆಸ್ವಾದಿಸುತ್ತಾರೆ.

ತರಗತಿಯ ವೈವಿಧ್ಯದಿಂದ ಶೈಕ್ಷಣಿಕವಾಗಿ ಮತ್ತು ಸಾಮಾಜಿಕ-ಭಾವನಾತ್ಮಕವಾಗಿ, ಎರಡೂ ರೀತಿಯಲ್ಲಿಯೂ ಅನುಕೂಲವಾಗುತ್ತದೆ. ವೈವಿಧ್ಯಮಯ ಕಲಿಕಾ ಅವಕಾಶಗಳನ್ನು ಒದಗಿಸುವುದಕ್ಕೆ ಶಿಕ್ಷಕರು ಮಹತ್ವ ನೀಡಬೇಕು. ಆಗ ಮಕ್ಕಳು ವೈವಿಧ್ಯಮಯ ಅನುಭವಗಳಿಗೆ ಒಡ್ಡಿಕೊಳ್ಳಲು ಅವಕಾಶವಾಗುತ್ತದೆ.

**ಪುಸ್ತಕದ ಪಠ್ಯದಲ್ಲಿನ ಪ್ರಶ್ನೆಗಳು: 20.2**

ಈ ಕೆಳಗಿನ ಹೇಳಿಕೆಗಳು ಸರಿಯೇ ಅಥವಾ ತಪ್ಪೇ ಎಂದು ತಿಳಿಸಿ:

- **(a)** ಮಕ್ಕಳು ತಮ್ಮ ಧಾರ್ಮಿಕ ನಂಬಿಕೆಗಳನ್ನು ತಮ್ಮ ಸ್ನೇಹಿತರೊಂದಿಗೆ ಹೇಳಿಕೊಳ್ಳುವುದನ್ನು ತಡೆಯಬೇಕು.
- **(b)** ಪ್ರತಿ ಮಗುವಿಗೂ ತನ್ನದೇ ಆದ ಕಲಿಕಾ ವೈಶಿಷ್ಟ್ಯವಿದೆ
- **(c)** ಕೇಳಿ ಕಲಿಯುವವರು ಕಥೆ ಕೇಳುವುದನ್ನು ಆನಂದಿಸುತ್ತಾರೆ
- **(d)** ಮಕ್ಕಳು ಗುಂಪಿನಲ್ಲಿ ಚರ್ಚಿಸುವ ಮೂಲಕ ಮತ್ತು ವಾಗ್ವಾದದ ಮೂಲಕ ಹೆಚ್ಚಾಗಿ ಕಲಿಯುತ್ತಾರೆ
- **(e)** ಮಕ್ಕಳು ತಮ್ಮ ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿದಂತೆ ಅನುಭವಗಳನ್ನು ಶಾಲೆಯಿಂದ ಮನೆಗೆ ಕೊಂಡೊಯ್ಯುತ್ತಾರೆ

### 20.3 ಮನೆ ಭಾಷೆ ಮತ್ತು ಶಾಲಾ ಭಾಷೆಗಳ ನಡುವಿನ ವಿಭಜನೆ

ಭಾರತ ಒಂದು ಬಹುಭಾಷಾ ರಾಷ್ಟ್ರವಾಗಿದೆ ಮತ್ತು ಸಂವಿಧಾನವು ಭಾರತದ ಬಹುಭಾಷಾ ಸ್ವರೂಪದ ಸಂರಕ್ಷಣೆಗೆ ಬದ್ಧವಾಗಿದೆ. ಭಾಷೆಯ ವೈವಿಧ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಇದು ವಿವಿಧ ಭಾಷೆಗಳು ಮತ್ತು ಉಪಭಾಷೆಗಳನ್ನು ಹೊಂದಿದೆ. ಮನೆ ಮತ್ತು ಶಾಲಾ ಭಾಷೆಗಳ ವಿಭಜನೆ ಶಾಲೆಯ ಬೋಧನಾ ಮಾಧ್ಯಮವು ಮನೆಯಲ್ಲಿ ಬಳಸುವ ಭಾಷೆಗಿಂತ ವಿಭಿನ್ನವೆಂಬುದನ್ನು ಸೂಚಿಸುತ್ತದೆ. ಉದಾಹರಣೆಗೆ, ಶಾಲೆಯಲ್ಲಿ ಮಕ್ಕಳಿಗೆ ಕಲಿಸುವಾಗ ಇಂಗ್ಲಿಷ್ ಭಾಷೆಯನ್ನು ಬೋಧನಾ ಮಾಧ್ಯಮವಾಗಿ ಬಳಸಿದರೆ ಮನೆಯಲ್ಲಿದ್ದಾಗ, ಮಗು ಮತ್ತು ಮಗುವಿನ ಕುಟುಂಬದವರು ಪರಸ್ಪರರ ಸಂವಹನಕ್ಕೆ ಮತ್ತು ನೆರೆಹೊರೆಯವರೊಂದಿಗಿನಸಂವಹನಕ್ಕೆ ತಮಿಳು ಭಾಷೆಯನ್ನು ಬಳಸುತ್ತಾರೆ.

**ಮನೆ ಮತ್ತು ಶಾಲೆಯ ನಡುವಿನ ವಿಭಜನೆಯು ಈ ಕಾರಣದಿಂದಾಗಿ ಸಂಭವಿಸಬಹುದು:**

- ಕುಟುಂಬವು ದೇಶದ ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯಕ್ಕೆ ಸ್ಥಳಾಂತರಗೊಂಡಿರಬಹುದು
- ಆ ಪ್ರಾಂತ್ಯದಲ್ಲಿ ಮಾತೃಭಾಷೆಯನ್ನು ಬೋಧನಾ ಮಾಧ್ಯಮವಾಗಿ ಬಳಸುವಂತಹ ಶಾಲೆಗಳ ಲಭ್ಯತೆಯ ಕೊರತೆ ಇದ್ದಿರಬಹುದು
- ಸ್ಥಳೀಯ ಉಪಭಾಷೆಗೆ ಶಾಲೆಯಲ್ಲಿ ಸೂಕ್ತ ಪ್ರಾಮುಖ್ಯ ಇಲ್ಲದಿರಬಹುದು
- ಶಾಲಾ ಮಕ್ಕಳು ಮೊದಲ ತಲೆಮಾರಿನ ಕಲಿಯುವವರಾಗಿರಬಹುದು
- ಶಾಲಾ ಶಿಕ್ಷಕರು ವಿವಿಧ ಭಾಷಾ ಹಿನ್ನೆಲೆಯಿಂದ ಬಂದಂತಹವರಾಗಿರಬಹುದು

**20.3.1 ಮನೆ ಭಾಷೆ ಮತ್ತು ಶಾಲಾ ಭಾಷೆಯ ನಡುವಿನ ವಿಭಜನೆಯಿಂದಾಗಿ ಮಕ್ಕಳ ಮೇಲೆ ಉಂಟಾಗುವ ಪರಿಣಾಮಗಳು:**

- ಸಹಪಾಠಿಗಳನ್ನು ಆತ್ಮೀಯ ಸ್ನೇಹಿತರನ್ನಾಗಿ ಮಾಡಿಕೊಳ್ಳಲು ಸಾಧ್ಯವಾಗದಿರುವುದು
- ಶೈಕ್ಷಣಿಕವಾಗಿ ಉತ್ತಮ ಅಂಕ/ಸಾಧನೆ/ನಿರ್ವಹಣೆ ಸಾಧ್ಯವಾಗದಿರುವುದು
- ಶಾಲೆಯಲ್ಲಿ ಮತ್ತೆ ಮತ್ತೆ ಅನುತ್ತೀರ್ಣರಾಗುವುದರಿಂದ ಸರಿಯಾಗಿ ಕಲಿಯದಿರುವುದರಿಂದಮಗುವಿನ ಆತ್ಮವಿಶ್ವಾಸ ಕುಗ್ಗಬಹುದು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಯಿಂದ ಹೊರಗುಳಿಯುವಂತೆ (ಡ್ರಾಪ್ ಔಟ್) ಆಗಬಹುದು.
- ಆತ್ಮ-ವಿಶ್ವಾಸ ಕಡಿಮೆಯಾಗುವುದು
- ಶಾಲೆ ಮತ್ತು ಶಿಕ್ಷಣದ ವಿಷಯದಲ್ಲಿ ಆತ್ಮೀಯ ಭಾವ ಮೂಡದಿರುವುದು
- ಓದಲು, ಬರೆಯಲು ಮತ್ತು ಅಭಿವ್ಯಕ್ತಿಸಲು ಸಾಧ್ಯವಾಗದಿರುವುದು
- ಮಕ್ಕಳು ಶಾಲೆಗೆ ಸೇರದಿರುವುದು, ಕಲಿಕೆಯಲ್ಲಿ ಯಶಸ್ವಿಯಾಗದಿರುವುದು. ದ
- ಮಕ್ಕಳ ಕಲಿಕೆಯಲ್ಲಿ ಪೋಷಕರ ಭಾಗವಹಿಸುವಿಕೆ ಕಡಿಮೆಯಾಗುವುದು
- ಮಕ್ಕಳು ತಮ್ಮ ಅಸ್ಮಿತೆ ಮತ್ತು ಪರಂಪರೆಯ ಬಗ್ಗೆ ಯಾವುದೇ ರೀತಿಯಲ್ಲಿ ಹೆಮ್ಮೆ ಪಡದಿರುವುದು

NCF, 2005 (ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು) ಭಾರತದ ಬಹುಭಾಷಾ ಲಕ್ಷಣವನ್ನು ಗೌರವಿಸುತ್ತದೆ ಮತ್ತು ಮಗುವಿನ ಬಹುಭಾಷಾ ಪ್ರಾವೀಣ್ಯಕ್ಕೆ ಇದನ್ನೊಂದು ಸಂಪನ್ಮೂಲವನ್ನಾಗಿ ಕಾಣಬೇಕೆಂದು ಸೂಚಿಸುತ್ತದೆ. ಎಲ್ಲ ಭಾಷೆಗಳಿಗೂ - ಅದು ಬುಡಕಟ್ಟು ಭಾಷೆಯಿರಲಿ ಅಥವಾ ಇಂಗ್ಲಿಷ್ ಇರಲಿ - ಸಮಾನವಾದ ಮೌಲ್ಯವನ್ನು ನೀಡಬೇಕು. NCF, 2005 (ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು) ಪ್ರತಿ ಮಾತೃಭಾಷೆಯನ್ನೂ

ಪ್ರೋತ್ಸಾಹಿಸುತ್ತದೆ ಮತ್ತು ಮಾತೃಭಾಷೆಯು ಮಗುವಿನ ಹಾಗೂ ಶಾಲೆಯ ನಡುವಿನ ಒಂದು ಪ್ರಮುಖ ಕೊಂಡಿಯಾಗಿದೆ ಎಂದು ಭಾವಿಸುತ್ತದೆ. ಒಂದು ವೇಳೆ ಮಗು ಮೊದಲ ತಲೆಮಾರಿನ ಕಲಿಯುವ ವಿದ್ಯಾರ್ಥಿಯಾಗಿದ್ದಲ್ಲಿ ಪ್ರಾರಂಭಿಕ ವರ್ಷಗಳಲ್ಲಿ ಬೋಧನೆಯು ಮಾತೃಭಾಷೆಯಲ್ಲಿಯೇ ಇರಬೇಕು ಮತ್ತು ಎರಡನೇ ಹಾಗೂ ಮೂರನೇ ಭಾಷೆಯ ಕಲಿಕೆಗಯ ಮೇಲೆ ಕಡಿಮೆ ಒತ್ತಾಯವಿರಬೇಕಾಗುತ್ತದೆ. ಏಕೆಂದರೆ ಆ ಭಾಷೆಗಳನ್ನು ಕಲಿಯಲು ಮಗುವಿಗೆ ಮನೆಯಲ್ಲಿ ಯಾವುದೇ ರೀತಿಯ ಬೆಂಬಲವಿರುವುದಿಲ್ಲ.

**ಅಂತಹ ವಿಭಜನೆಯ ಇಲ್ಲದಿದ್ದಲ್ಲಿ**:

- ಶಾಲಾಶಿಕ್ಷಣವು ವಿನೋದಮಯವಾದ ಮತ್ತು ಆನಂದದಾಯಕವಾದ ಅನುಭವವಾಗುತ್ತದೆ.
- ಮಕ್ಕಳ ಆತ್ಮವಿಶ್ವಾಸವು ಸುಧಾರಿಸುತ್ತದೆ
- ಮಕ್ಕಳಿಗೆ ಶಾಲೆಯ ಅನುಭವಗಳೊಂದಿಗೆ ಉತ್ತಮವಾದ ಸಂಬಂಧವನ್ನು ಹೊಂದಲು ಸಾಧ್ಯವಾಗುವುದರ ಜೊತೆಗೆ "ಇದು ನನ್ನ ಶಾಲೆ" ಎಂಬ ಭಾವನೆಯನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ
- ಸಹಪಾಠಿಗಳೊಂದಿಗೆ ಗೆಳೆತನವನ್ನು ಬೆಳೆಯುತ್ತದೆ, ಸಾಮಾಜಿಕವಾಗಿ ಒಳಗೊಳ್ಳುವಿಕೆಗೆ ಮತ್ತು ಪರಸ್ಪರ ಬೆರೆಯುವಿಕೆಗೆ ಕಾರಣವಾಗುತ್ತದೆ
- ಮಕ್ಕಳು ಶಿಕ್ಷಕರೊಂದಿಗೆ ಮತ್ತು ಇತರರೊಂದಿಗೆ ಪರಿಣಾಮಕಾರಿಯಾಗಿ ಸಂವಹನ ನಡೆಸಬಲ್ಲವರಾಗುತ್ತಾರೆ.
- ಶಾಲೆಯಲ್ಲಿ ಮಕ್ಕಳನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ.
- ಮಕ್ಕಳು ಹೊರಗಿನ ಪ್ರಪಂಚದೊಂದಿಗೆ ಹೆಚ್ಚಿನ ಸಂಪರ್ಕವನ್ನು ಹೊಂದಲು ಸಾಧ್ಯವಾಗುತ್ತದೆ

**ವೈವಿಧ್ಯತೆಯನ್ನು ಅರ್ಥಮಾಡಿಕೊಳ್ಳುವುದು**

- ಶಿಕ್ಷಣದ ವ್ಯಾಪ್ತಿಯನ್ನು ವಿಸ್ತರಿಸುತ್ತದೆ
- ಪ್ರಾಥಮಿಕ ಶಾಲಾ ಅವಧಿಯಲ್ಲಿ ಕಲಿಕೆಯ ಫಲಿತಾಂಶಗಳನ್ನು ಉತ್ತಮಗೊಳಿಸುತ್ತದೆ
- ಸ್ಥಳೀಯ ಭಾಷೆಗಳನ್ನು ರಕ್ಷಿಸಲು ಮತ್ತು ಉಳಿಸಿಕೊಳ್ಳಲು ಸಹಾಯ ಮಾಡುತ್ತದೆ

ಪ್ರಾಥಮಿಕ ಶಾಲೆಗಳಲ್ಲಿ ಮಾತೃಭಾಷೆಯನ್ನು ಬೋಧನಾ ಮಾಧ್ಯಮವಾಗಿ ಅಳವಡಿಸಿಕೊಳ್ಳುವ ಮೂಲಕ ಮನೆಭಾಷೆ ಮತ್ತು ಶಾಲೆಯ ಭಾಷೆಗಳ ವಿಭಜನೆಯನ್ನು

ಅತಿಕ್ರಮಿಸಲು ಸಾಧ್ಯವಾಗುತ್ತದೆ. ಕ್ರಮೇಣವಾಗಿ ಮಾತೃಭಾಷೆಯನ್ನು ಕಡಿಮೆ ಮಾಡುತ್ತಾ ಮತ್ತು ಎರಡನೇ ಮತ್ತು ಮೂರನೇ ಭಾಷೆಯ ಕಲಿಕೆಯನ್ನು ನಿಧಾನವಾಗಿ ಪ್ರಾರಂಭಿಸುವ ಮೂಲಕ ಮನೆ-ಶಾಲೆಯ ಭಾಷಾ ವಿಭಜನೆಯನ್ನು ಗರಿಷ್ಟ ಮಟ್ಟದಲ್ಲಿ ನಿವಾರಣೆ ಮಾಡಬಹುದು. ಸ್ಥಳೀಯ ಸಮುದಾಯಗಳು ಸಹ ಸಮೃದ್ಧ ಸಾಂಸ್ಕೃತಿಕ ಸಂಪನ್ಮೂಲಗಳನ್ನು ಸಹ ಹೊಂದಿರುತ್ತವೆ: ಸ್ಥಳೀಯ ಕಥೆಗಳು, ಹಾಡುಗಳು, ಹಾಸ್ಯಗಳು ಮತ್ತು ಒಗಟುಗಳು ಮತ್ತು ಕಲೆ, ಇವೆಲ್ಲವನ್ನೂ ಭಾಷೆಯನ್ನು ಮತ್ತು ಜ್ಞಾನವನ್ನು ಉತ್ಕೃಷ್ಟಗೊಳಿಸಲು ಬಳಸಬಹುದು.

**ಪುಸ್ತಕದ ಪಠ್ಯದಲ್ಲಿನ ಪ್ರಶ್ನೆಗಳು: 20.2**

ಸರಿಯಾದ ಆಯ್ಕೆಯನ್ನು ಆರಿಸಿ ಮತ್ತು ಖಾಲಿ ಜಾಗಗಳನ್ನು ಭರ್ತಿ ಮಾಡಿ:

1) ಶಾಲಾಪೂರ್ವ ಶಿಕ್ಷಣ ಮತ್ತು ಪ್ರಾಥಮಿಕ ಶಾಲೆಗಳಲ್ಲಿ ಮಾತೃಭಾಷೆಯನ್ನು ಬಳಸುವುದರಿಂದ ಮಕ್ಕಳು ……………… (ಶಾಲೆಯಲ್ಲಿ ಉಳಿಯಬಹುದು/ಶಾಲೆಯಿಂದ ಹೊರಗುಳಿಯಬಹುದು)
2) ಶಾಲಾಪೂರ್ವ ಶಿಕ್ಷಣದಲ್ಲಿ ಮಾತೃಭಾಷೆಯ ಬಳಕೆ ………… ಭಾವನೆಯನ್ನು ಉತ್ತೇಜಿಸುತ್ತದೆ. (ಹೆಮ್ಮೆಯ/ಆತ್ಮೀಯತೆಯ)
3) ಒಂದು ವೇಳೆ ಬೋಧನಾ ಮಾಧ್ಯಮವು ಭೋಜ್‌ಪುರಿ ಭಾಷೆಯಾಗಿದ್ದು, ಮನೆಯಲ್ಲಿ ಪೋಷಕರು ಇಂಗ್ಲಿಷ್ ಮಾತನಾಡುತ್ತಿದ್ದರೆ, ಇದು ಮನೆ ಮತ್ತು ಶಾಲೆಯ ……………….. (ಭಾಷೆಯ ವಿಭಜನೆ/ಭಾಷೆಯ ಏಕತೆ) ಪ್ರಕರಣವಾಗಿದೆ
4) ಮಾತೃಭಾಷೆಯು ………………ಯಲ್ಲಿ ಮಾತನಾಡುವ ಭಾಷೆಯಾಗಿದೆ (ಮನೆ/ಶಾಲೆ)
5) ಬೋಧನಾ ಮಾಧ್ಯಮವು ……………………ಯಲ್ಲಿ ಬಳಸುವ ಭಾಷೆಯಾಗಿದೆ (ಮನೆ/ಶಾಲೆ)

## 20.4 ಮಕ್ಕಳ ಮೇಲೆ ಲಿಂಗ ಮತ್ತು ಜಾತಿಯ ಸ್ಟೀರಿಯೊಟೈಪ್‌ಗಳ (ಸಿದ್ಧಮಾದರಿಗಳ) ಪ್ರಭಾವ

### 20.4.1 ಸಿದ್ಧಮಾದರಿ (ಸ್ಟೀರಿಯೊಟೈಪ್)

ಎಲ್ಲ ಸಮಾಜಗಳಲ್ಲಿ ಸಿದ್ಧಮಾದರಿಗಳಿರುತ್ತವೆ. ಸಿದ್ಧಮಾದರಿ ಎನ್ನುವುದು ಒಂದು ಜನಸಮುದಾಯದ ಕುರಿತಾದ ಸ್ಥಿರವಾದ ಕಲ್ಪನೆ ಅಥವಾ ಊಹೆಯಾಗಿದೆ. ಈ ಸ್ಥಿರ ಕಲ್ಪನೆಗಳು ಅಥವಾ ಊಹೆಗಳು ಸತ್ಯವಾಗಿರಬೇಕಿಲ್ಲ ಅಥವಾ ಸಾರ್ವತ್ರಿಕವಾಗಿ ಅಂಗೀಕರಿಸಲಾದ ಕಲ್ಪನೆಯಾಗಿರಬೇಕಿಲ್ಲ. ಬಹುತೇಕ ಸಂದರ್ಭಗಳಲ್ಲಿ ನಾವು ಮತ್ತೊಬ್ಬರನ್ನು ಹೇಗೆ ಪರಿಭಾವಿಸುತ್ತೇವೆ ಎಂಬುದನ್ನು ಜನಾಂಗ, ಲಿಂಗ, ವಯಸ್ಸು, ಜಾತಿ, ಧರ್ಮ ಇತ್ಯಾದಿಗಳ ವಿಷಯದಲ್ಲಿ ಅತೀ ಸರಳೀಕರಿಸಿದ ನಮ್ಮ ಊಹೆಗಳ ಮೂಲಕ ನಿರ್ಧರಿಸಬಹುದು. ಒಂದು ನಿರ್ದಿಷ್ಟ ಗುಂಪಿಗೆ ಸೇರಿದ ಒಬ್ಬ ವ್ಯಕ್ತಿಯು ಗುಂಪಿನ ಕುರಿತಾಗಿ ಯಾವ ಸಿದ್ಧಮಾದರಿ ಅಸ್ತಿತ್ವದಲ್ಲಿದೆಯೋ ಆ ಸಿದ್ಧಮಾದರಿಯ ಗುಣಲಕ್ಷಣವನ್ನು ಹೊಂದಿರತಕ್ಕದ್ದು ಎಂದು ಅಪೇಕ್ಷಿಸಲಾಗುತ್ತದೆ.

ಉದಾಹರಣೆಗೆ, ನಾವು ಒಂದು ನಿರ್ದಿಷ್ಟ ಜಾತಿಗೆ ಸೇರಿದ ಕೆಲವು ವ್ಯಕ್ತಿಗಳನ್ನು ಭೇಟಿ ಮಾಡಿ ಮತ್ತು ಅವರೊಂದಿಗೆ ಸಂವಹನ ನಡೆಸಿ ಅವರಲ್ಲಿ ಕೆಲವು ಗುಣಲಕ್ಷಣಗಳು ಮತ್ತು ಅಭ್ಯಾಸಗಳನ್ನು ಕಂಡೊಡನೆ, ಈ ಜಾತಿಯ ಎಲ್ಲ ಸದಸ್ಯರು ಒಂದೇ ರೀತಿಯ ಗುಣಲಕ್ಷಣಗಳನ್ನು ಹೊಂದಿರುತ್ತಾರೆ ಎಂಬ ನಂಬಿಕೆಯನ್ನು ನಾವು ಬೆಳೆಸಿಕೊಳ್ಳುತ್ತೇವೆ. ಆದರೆ ಇಂತಹ ಸಾಮಾನ್ಯೀಕರಣವು ಪ್ರತಿಯೊಬ್ಬ ಸದಸ್ಯರ ವಿಷಯದಲ್ಲಿ ಸತ್ಯವಾಗಿರುವುದಿಲ್ಲ. ಸಿದ್ಧಮಾದರಿಯ ನಂಬಿಕೆಗಳು ಜಟಿಲವಾಗಿರರಬಹುದು, ಆದರೆ ಅವು ಕಾಲಾನಂತರದಲ್ಲಿ ಬದಲಾಗುತ್ತಾ ಹೋಗುತ್ತವೆ ಮತ್ತು ಬದಲಾಗುತ್ತಿವೆ.

ಸಿದ್ಧಮಾದರಿಗಳು ಯಾವಾಗಲೂ ಮೂಲಸ್ವರೂಪವಾಗಿ ನಕಾರಾತ್ಮಕವಾಗಿರುವುದಿಲ್ಲ; ಆದರೆ ಅವು ವ್ಯಕ್ತಿಯ ವೈಯಕ್ತಿಕ ಮತ್ತು ಅಂತರ್ನಿಷ್ಠ ಸಾಮರ್ಥ್ಯಗಳು, ಅವಕಾಶಗಳು ಮತ್ತು ಪರಿಸರವನ್ನು ಕಡೆಗಣಿಸುವ ಊಹೆಗಳಾಗಿರುವುದರಿಂದ, ಅವು ಪೂರ್ವಗ್ರಹಗಳಿಂದ ಕೂಡಿದ ವಿಚಾರಗಳಾಗಿರುತ್ತದೆ. ನಕಾರಾತ್ಮಕ ಸಿದ್ಧಮಾದರಿಗಳು ಜನರ ಆಯ್ಕೆಗಳು ಮತ್ತು ಅವಕಾಶಗಳನ್ನು ನಿರ್ಬಂಧಿಸುವ ಮೂಲಕ ಅವರ ಪೂರ್ಣ ಸಾಮರ್ಥ್ಯ ಹೊರಬರದಂತೆ ಅಡೆತಡೆ ಉಂಟು ಮಾಡುತ್ತವೆ. ಅಂತರಂಗ-ಬಹಿರಂಗ, ಪ್ರತ್ಯಕ್ಷ-ಪರೋಕ್ಷ, ಪುನರಾವರ್ತಿತ ತಾರತಮ್ಯ ಮುಂತಾದವುಗಳ ಮೂಲದಲ್ಲಿ ಸಿದ್ಧಮಾದರಿಗಳೇ ಇರುತ್ತವೆ.

### 20.4.2 ಲಿಂಗಸಂಬಂಧೀ ಸಿದ್ಧ ಮಾದರಿಗಳು

ಇದು ಗಂಡು ಹೆಣ್ಣುಗಳ ನಡುವಿನ ವರ್ತನೆಗೆ ಸಂಬಂಧಿಸಿದುದಾಗಿದೆ. ಇದು ಗಂಡು ಹೆಣ್ಣುಗಳು ಹೊಂದಿರುವ ಗುಣಲಕ್ಷಣಗಳ ಬಗ್ಗೆ ಅವರಲ್ಲಿ ಪೂರ್ವನಂಬಿಕೆಗಳನ್ನು ಇದು ಸೃಷ್ಟಿಸುತ್ತದೆ. ಹುಡುಗ ಹುಡುಗಿಯರ ಅಥವಾ ಒಂದು ನಿರ್ದಿಷ್ಟ ಜಾತಿಗೆ ಸೇರಿದ ಜನರ ಸಿದ್ಧಮಾದರೀ ಪಾತ್ರಗಳನ್ನು ಹಾಡುಗಳು, ಚಲನಚಿತ್ರಗಳು, ಸುದ್ದಿ ಪ್ರಸಾರಗಳು, ಜಾಹೀರಾತುಗಳು, ಇತ್ಯಾದಿ ಮಾಧ್ಯಮಗಳ ಮೂಲಕ ಇನ್ನಷ್ಟು ಬಲಪಡಿಸಲಾಗುತ್ತದೆ. ಈ ಕೆಳಗಿನ ಕೋಷ್ಟಕವು ಸಮಾಜವು ಗಂಡು ಹೆಣ್ಣುಗಳಿಂದ ನಿರೀಕ್ಷಿಸುವ ಗುಣಲಕ್ಷಣಗಳ ಉದಾಹರಣೆಗಳನ್ನು ಚಿತ್ರಿಸಿದೆ.

| **ಮಹಿಳೆ** | **ಪುರುಷ** |
|---|---|
| ಅವಲಂಬಿತರು | ಸ್ವತಂತ್ರರು |
| ದುರ್ಬಲರು | ಬಲಶಾಲಿಗಳು |
| ಕಡಿಮೆ ಪ್ರಾಮುಖ್ಯವುಳ್ಳವರು | ಹೆಚ್ಚು ಪ್ರಾಮುಖ್ಯವುಳ್ಳವರು |
| ಭಾವನಾತ್ಮಕ ಜೀವಿಗಳು | ತಾರ್ಕಿಕರು |
| ಅನುಷ್ಠಾನಕಾರರು | ನಿರ್ಧಾರ ತೆಗೆದುಕೊಳ್ಳುವವರು |
| ಮನೆ ನಿರ್ವಹಿಸುವವರು | ಹೊಟ್ಟೆಪಾಡಿಗೆ ಸಂಪಾದಿಸುವವರು |
| ಬೆಂಬಲಿಗರು | ನಾಯಕರು |
| ಭಯಭೀತನಾರಾದವರು | ಧೈರ್ಯಶಾಲಿಗಳು |

ಶಿಕ್ಷಕರಾದವರು ಯಾವುದೇ ಸಿದ್ಧಮಾದರಿಗಳನ್ನು ಪ್ರೋತ್ಸಾಹಿಸದಂತೆ ಅಥವಾ ಸಿದ್ಧಮಾದರಿಗಳು ತಲೆಯೆತ್ತದಂತೆ ಜಾಗೃತರಾಗಿರಬೇಕು.

### 20.5 ಕಲಿಕೆ ಮತ್ತು ಆಟದಲ್ಲಿ ಲಿಂಗ ತಾರತಮ್ಯವಿಲ್ಲದಂತೆ ಸಮಾನ ಭಾಗವಹಿಸುವಿಕೆಯನ್ನು ಉತ್ತೇಜಿಸುವುದು

ಶಾಲೆಗಳಿಗೆ ಲಿಂಗ ಸಮಾನತೆಯನ್ನು ಉತ್ತೇಜಿಸುವ ಜವಾಬ್ದಾರಿ ಇರುತ್ತದೆ. ಇಂತಹ ಜವಾಬ್ದಾರಿಗಳನ್ನು ನಿಭಾಯಿಸಲು ಶಾಲೆಗಳು ಹಲವಾರು ವಿಧಾನಗಳು ಮತ್ತು ತಂತ್ರಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಇಂತಹ ಗುರಿಯನ್ನು ಸಾಧಿಸಲು ಕಲಿಕೆ ಮತ್ತು ಆಟದ ಎಲ್ಲಾ ಚಟುವಟಿಕೆಗಳ ಕೇಂದ್ರ ಆಶಯ ಈ ಗುರಿಯನ್ನು ಸಾಧಿಸುವುದಾಗಿರಬೇಕು.

ಅಳವಡಿಸಿಕೊಳ್ಳಬಹುದಾದ ಕೆಲವು ವಿಧಾನಗಳು:

### 20.5.1 ಸರಿಯಾದ ಆಟಿಕೆ/ಟಿಎಲ್‌ಎಮ್ ಅನ್ನು ಆಯ್ಕೆ ಮಾಡುವುದು

ಶಾಲಾಪೂರ್ವ ಶಿಕ್ಷಣ (ಇಸಿಸಿಇ) ಕೇಂದ್ರವು ಸಾಮಾನ್ಯವಾಗಿ ಆಟ ಮತ್ತು ಆಟಿಕೆಗಳ ಮೇಲೆ ಹೆಚ್ಚು ಅವಲಂಬಿತವಾಗಿರುತ್ತವೆ. ಈ ಆಟಿಕೆಗಳು ಲಿಂಗ-ಸ್ನೇಹಿ ಕೇಂದ್ರವನ್ನು ನಿರ್ಮಾಣ ಮಾಡುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಇಸಿಸಿಇ ಶಿಕ್ಷಕರು ಆಟಿಕೆ/ಆಟದ ಸಾಮಗ್ರಿಗಳಿಂದ ಕಲಿಸುವ ಕೌಶಲ್ಯಗಳ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕಾಗುತ್ತದೆ. ಉದಾಹರಣೆಗೆ, ಒಂದು ಚೆಂಡನ್ನು ಚಲನೆಯ ಕೌಶಲ್ಯ ಮತ್ತು ಗೋಲಾಕೃತಿಯ ಬಗ್ಗೆ ತಿಳಿಸಲು ಬಳಸಬಹುದು. ದೇಹದ ಅಂಗಾಂಗಗಳನ್ನು ಪರಿಚಯಿಸಲು ಒಂದು ಗೊಂಬೆಯನ್ನು ಬಳಸಬಹುದು. ಲಿಂಗ-ಸೂಕ್ಷತೆಯನ್ನು ಅರಿತಿರುವ ಶಿಕ್ಷಕರು ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವಂತಹ ಆಟಿಕೆಗಳ ಆಧಾರದ ಮೇಲೆ ಗೊಂಬೆ, ಕಾರು, ಅಥವಾ ಬಿಲ್ಡಿಂಗ್ ಬ್ಲಾಕ್ ಗಳನ್ನು ಆಯ್ಕೆ ಮಾಡಿ ಮಗುವಿಗೆ ಆಟವಾಡಲು ಕೊಡುತ್ತಾರೆಯೇ ವಿನಃ ಮಗುವಿನ ಲಿಂಗಕ್ಕೆ ಅನುಗುಣವಾಗಿ ಆಟಿಕೆಗಳನ್ನು ಕೊಡುವುದಿಲ್ಲ. ಲಿಂಗ-ಪಕ್ಷಪಾತವಲ್ಲದ ಆಟಿಕೆಗಳಾದ ಒಗಟುಗಳು, ಬ್ಲಾಕ್ ಗಳು, ಜೇಡಿಮಣ್ಣು ಇತ್ಯಾದಿಗಳನ್ನೂ ಸಹ ಶಿಕ್ಷಕರು ಆಯ್ಕೆ ಮಾಡಬಹುದು.

### 20.5.2 ಕಥೆಗಳನ್ನು ಹೇಳುವುದು

ಮಕ್ಕಳಿಗೆ ಕಥೆಗಳನ್ನು ಕೇಳುವುದು ಮತ್ತು ಹೇಳುವುದೆಂದರೆ ತುಂಬಾ ಇಷ್ಟ. ಭಾಷಾ ಬೆಳವಣಿಗೆಗೆ ಕಥೆಗಳು ಹೆಚ್ಚಿನ ಅವಕಾಶವನ್ನು ಒದಗಿಸುತ್ತವೆ ಜೊತೆಗೆ ಪಠ್ಯದಲ್ಲಿರುವ ವಿಷಯವನ್ನು ಮತ್ತಷ್ಟು ಆಸಕ್ತಿದಾಯಕವಾಗಿಸುತ್ತವೆ. ಕಥೆಗಳನ್ನು ಆಯ್ಕೆ ಮಾಡುವಾಗ ಎಚ್ಚರಿಕೆ ವಹಿಸಬೇಕಾಗುತ್ತದೆ ಅಂದರೆ ಅದು ತರಗತಿಯಲ್ಲಿ ಲಿಂಗ ಸಮಾನತೆ ಮತ್ತು ಲಿಂಗ ಸೂಕ್ಷ್ಮತೆಯನ್ನು ನಿರ್ಮಿಸಲು ಸಹಾಯವಾಗುತ್ತದೆ. ಕಥೆಗಳನ್ನು ನಿಗದಿ ಮಾಡಿಕೊಳ್ಳುವಾಗ ಕಥೆಗಳಲ್ಲಿ ಬರುವಂತಹ ಪಾತ್ರಗಳ ಬಗ್ಗೆ, ವಿವಿಧ ಲಿಂಗಗಳನ್ನು ಕಥೆಯಲ್ಲಿ ಹೇಗೆ ಚಿತ್ರಿಸಲಾಗಿದೆ ಎಂಬುದರ ಬಗ್ಗೆ ಹೆಚ್ಚಿನ ಗಮನ ಹರಿಸಬೇಕಾಗುತ್ತದೆ. ಅಂದರೆ, ಕಥೆಯಲ್ಲಿ ಬರುವ ಪುರುಷರು ಮನೆಯ ಹೊರಗೆ, ಹೊಲದಲ್ಲಿ ಅಥವಾ ಕಾರ್ಖಾನೆಗಳಲ್ಲಿ ಅಥವಾ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾರೆಯೇ? ಮಹಿಳೆಯರನ್ನು ಯಾವಾಗಲೂ ಚೆಂದವಾಗಿ ಮತ್ತು ಮನೋಹರವಾಗಿ ಬಿಂಬಿಸಲಾಗಿದೆಯೇ? ಯಾವಾಗಲೂ ಹುಡುಗಿಯರು ಅಪ್ಸರೆಯರಂತೆ ಕಾಣಿಸುವರೇ ಖಳನಾಯಕರು

ಯಾವಾಗಲೂ ದಷ್ಟಪುಷ್ಟವಾದ ಪುರುಷರಾಗಿರುವರೇ? ಹುಡುಗಿಯರು ಕೇವಲ ಅಡುಗೆಮನೆಯಲ್ಲಿ ಮತ್ತು ಮನೆಕೆಲಸಗಳಲ್ಲಿಯೇ ತೊಡಗಿರುತ್ತಾರೆಯೇ? ಇತ್ಯಾದಿ.

ಮಕ್ಕಳಿಗೆ ಕಥೆಯನ್ನು ಹೇಳಿದ ನಂತರ, ಕಥೆಯಲ್ಲಿ ಬರುವ ಪಾತ್ರಧಾರಿಗಳ ಪಾತ್ರಗಳನ್ನು ಅದಲುಬದಲು ಮಾಡಿ ಅದಕ್ಕೆ ಸಂಬಂದಿಸಿದಂತೆ ಪ್ರಶ್ನೆಗಳನ್ನು ಕೇಳುವ ಮೂಲಕ ಮಕ್ಕಳನ್ನು ಚರ್ಚೆಯಲ್ಲಿ ಪಾಲ್ಗೊಳ್ಳುವಂತೆ ಮಾಡಿರಿ. ತಂದೆಯ ಬದಲಾಗಿ ತಾಯಿಯು ಕಚೇರಿಗೆ ಹೋಗುತ್ತಾರೆ ಮತ್ತು ತಂದೆ ಮನೆಯಲ್ಲಿದ್ದು ಆಹಾರವನ್ನು ತಯಾರಿಸುತ್ತಾರೆ. ತಾಯಿ ಪರಿಕರಗಳನ್ನು ಖರೀದಿಸಲು ಮಾರುಕಟ್ಟೆಗೆ ಹೋಗುತ್ತಾರೆ ಮತ್ತು ತಂದೆ ಮನೆಯಲ್ಲಿದ್ದು ಮನೆಯನ್ನು ಸ್ವಚ್ಛಗೊಳಿಸುತ್ತಾರೆ. ತಾಯಿಯ ಪೋಷಕರು ತಾಯಿಯ ಕುಟುಂಬದವರೊಂದಿಗೆ ವಾಸಿಸುತ್ತಾರೆ, ಇತ್ಯಾದಿ ಅಂಶಗಳ ಕುರಿತು ಹೇಳುವುದು.

### 20.5.3 ನಿಷ್ಪಕ್ಷಪಾತ ಆಟವನ್ನು ಪ್ರೋತ್ಸಾಹಿಸಿ

ಹುಡುಗಿಯರು ಕೇವಲ ಅಡುಗೆಮನೆ ಪರಿಕರಗಳ ಜೊತೆ ಆಟವಾಡುವುದನ್ನು ಪ್ರೋತ್ಸಾಹಿಸುವ ಬದಲು, ಎಲ್ಲಾ ಆಟಿಕೆಗಳನ್ನು ಎಲ್ಲಾ ಮಕ್ಕಳಿಗೆ ಸುಲಭವಾಗಿ ಸಿಗುವಂತೆ ಮಕ್ಕಳ ಮುಂದೆ ಜೋಡಿಸಿ ಮತ್ತು ನಿರ್ದಿಷ್ಟ ಲಿಂಗದ ಮಕ್ಕಳು ಯಾವ ಆಟಿಕೆಯೊಂದಿಗೆ ಆಡಬೇಕು ಅಥವಾ ಆಡಬಾರದು ಎಂದು ಸೂಚನೆಗಳನ್ನು ನೀಡದೆಯೇ ಅವರಿಗೆ ಆಯ್ಕೆಗಳನ್ನು ಮಾಡಲು ಅನುಮತಿ ನೀಡಿ. ಅವರು ಯಾವ ಆಟಿಕೆಯೊಂದಿಗೆ ಆಡಬೇಕೆಂದು ತಾವೇ ನಿರ್ಧರಿಸಿಕೊಳ್ಳಲಿ. ಅಡುಗೆ ಮನೆ ಪರಿಕರಗಳು, ಚೆಂಡು, ಉಯ್ಯಾಲೆ ಇತ್ಯಾದಿಗಳನ್ನು ಎಲ್ಲಾ ಮಕ್ಕಳಿಗೆ ಆಟವಾಡಲು ರಚನಾತ್ಮಕ ಸಮಯವನ್ನು ನೀಡಿ. ಜೊತೆಗೆ ಎಲ್ಲಾ ಮಕ್ಕಳಿಗೆ ಕ್ರಿಕೆಟ್, ಹಾಕಿ, ಖೋ-ಖೋ, ಕಬ್ಬಡ್ಡಿ, ಫುಟ್ಬಾಲ್ ಇತ್ಯಾದಿ ಹೊರಾಂಗಣ ಆಟಗಳನ್ನು ಆಡುವಂತಹ ಅವಕಾಶಗಳನ್ನು ಸಹ ಒದಗಿಸಿ.

### 20.5.4 ಸ್ನೇಹವನ್ನು ಪ್ರೋತ್ಸಾಹಿಸಿ

ಗಂಡು-ಹೆಣ್ಣೆಂಬ ಭೇದವಿಲ್ಲದಂತೆ ಎಲ್ಲರೊಂದಿಗೆ ಸ್ನೇಹ ಬೆಳೆಸಿಕೊಳ್ಳುವಂತೆ ಮಕ್ಕಳನ್ನು ಪ್ರೋತ್ಸಾಹಿಸಿ. ಒಂದು ವೇಳೆ ವಯಸ್ಕರಾದ ಹುಡುಗಿ ಮತ್ತು ಹುಡುಗನು "ಮುದ್ದಾದ ಜೋಡಿ" ಎಂಬಂತೆ ಒಟ್ಟಿಗೆ ಆಟವಾಡುವ ಸನ್ನಿವೇಶ ಉಂಟಾದಲ್ಲಿ, ಅದು ಒಳ್ಳೆಯ ಸ್ನೇಹಕ್ಕೆ ಅನಗತ್ಯ ಒತ್ತಡ, ಧ್ರುವೀಕರಣ ಮತ್ತು ಗೊಂದಲಕ್ಕೆ ಕಾರಣವಾಗಬಹುದು. ಲಿಂಗದ ಆಧಾರದ ಮೇಲೆ ಎರಡು ತಂಡಗಳನ್ನು ರಚಿಸುವಂತಹ ಸುಲಭ ಮಾರ್ಗವನ್ನು

ಆಯ್ಕೆ ಮಾಡುವ ಬದಲು ಪ್ರತಿ ತಂಡದಲ್ಲಿಯೂ ಹುಡುಗರು ಮತ್ತು ಹುಡುಗಿಯರನ್ನು ಹೊಂದಿರುವಂತೆ ತಂಡವನ್ನು ರೂಪಿಸಿ ಅವರನ್ನು ಆಡಲು ಪ್ರೋತ್ಸಾಹಿಸಿ.

### 20.5.5 ಲಿಂಗ-ಆಧಾರಿತ ಕೆಲಸದ ವಿತರಣೆಯನ್ನು ತಪ್ಪಿಸಿ

ಊಟದ ಸಮಯದಲ್ಲಿ ಅಥವಾ ಆಟಿಕೆಗಳನ್ನು ಜೋಡಿಸುವಾಗ ನಿಮಗೆ ಸಹಾಯ ಮಾಡಲು ಯಾರನ್ನಾದರು ಹುಡುಕುತ್ತಿರುವಾಗ, ಮಕ್ಕಳು ಇಚ್ಚೆಯಿಂದ ಕೆಲಸ ಮಾಡಿಕೊಳ್ಳಲು ಅನುಮತಿಸಿ. ಆಹಾರ ಮತ್ತು ತಟ್ಟೆಗಳನ್ನು ವಿತರಣೆ ಮಾಡಲು ಹುಡುಗರು ಆಸಕ್ತಿ ತೋರಿಸಬಹುದು ಆದರೆ ಹುಡುಗಿಯರು ಆಟಿಕೆಗಳನ್ನು ಜೋಡಿಸಲು ಇಷ್ಟಪಡಬಹುದು.ಒಂದು ವೇಳೆ ನಿಮಗೆ ಲಿಂಗ ವಿಭಜನೆ ಕಂಡುಬಂದಲ್ಲಿ "ರೋಹಿತ್, ಆಹಾರ / ತಟ್ಟೆಗಳು / ಚಮಚ ಇತ್ಯಾದಿಗಳನ್ನು ವಿತರಿಸಲು ನೀನು ನನಗೆ ಸಹಾಯ ಮಾಡುವೆಯಾ?" ಎಂದು ಅಥವಾ "ಟಿನ್ನಿ, ದಯವಿಟ್ಟು ಆಟಿಕೆಗಳನ್ನು ಸ್ವಚ್ಚವಾಗಿ ಜೋಡಿಸಲು ನೀನು ನನಗೆ ಸಹಾಯ ಮಾಡುವೆಯಾ? ಎಂಬ ವಿನಂತಿಯೊಂದಿಗೆ ಲಿಂಗ ಸಮಾನತೆಯನ್ನು ಪ್ರೋತ್ಸಾಹಿಸಿ.

### ಪುಸ್ತಕದ ಪಠ್ಯದಲ್ಲಿನ ಪ್ರಶ್ನೆಗಳು: 20.4

ಕೆಳಗೆ ಪಟ್ಟಿ ಮಾಡಲಾದ ಪ್ರತಿಯೊಂದು ಸನ್ನಿವೇಶದಲ್ಲಿ ಲಿಂಗ ಸಮಾನತೆಯ ಭಾಗವಹಿಸುವಿಕೆಯನ್ನು ಶಿಕ್ಷಕರು ಉತ್ತೇಜಿಸುವ ಒಂದು ಮಾರ್ಗವನ್ನು ಪಟ್ಟಿ ಮಾಡಿ:

ಎ) ಆಟಿಕೆಗಳನ್ನು ಆಯ್ಕೆಮಾಡುವುದು

ಬಿ) ಕಥೆಗಳನ್ನು ಹೇಳುವುದು

ಸಿ) ನಿಷ್ಪಕ್ಷಪಾತ ಆಟ

ಡಿ) ಸ್ನೇಹ

ಇ) ಕೆಲಸದ ವಿತರಣೆ

## ನೀವು ಏನು ಕಲಿತಿದ್ದೀರಿ

- ವೈವಿಧ್ಯ: ಅರ್ಥ ಮತ್ತು ಮಹತ್ವ
- ವ್ಯತ್ಯಾಸಗಳನ್ನು ಗುರುತಿಸುವುದು ಮತ್ತು ಆಚರಿಸುವುದು.
- ವೈವಿಧ್ಯಕ್ಕೆ ಕಾರಣವಾಗುವ ಅಂಶಗಳು ಮತ್ತು ಕಲಿಕೆಯ ಮೇಲೆ ಅವುಗಳ ಪರಿಣಾಮ
- ಜನಾಂಗ
- ಬಹುಭಾಷಿಕತೆ
- ಜನಾಂಗೀಯತೆ
- ಲಿಂಗ
- ಲೈಂಗಿಕ ದೃಷ್ಟಿಕೋನ
- ಸಾಮಾಜಿಕ-ಆರ್ಥಿಕ ಸ್ಥಿತಿ
- ವಯಸ್ಸು
- ಧಾರ್ಮಿಕ ನಂಬಿಕೆಗಳು
- ಕಲಿಕಾ ಶೈಲಿ
- ಮನೆ ಭಾಷೆ ಮತ್ತು ಶಾಲಾ ಭಾಷೆಯ ವಿಭಜನೆ
- ಮಕ್ಕಳ ಮೇಲೆ ಲಿಂಗ ಮತ್ತು ಜಾತಿ ಸಿದ್ಧಮಾದರಿಗಳ ಪ್ರಭಾವ
- ಕಲಿಕೆ ಮತ್ತು ಆಟದಲ್ಲಿ ಎಲ್ಲಾ ಮಕ್ಕಳ ಲಿಂಗ-ಸಮಾನವಾದ ಭಾಗವಹಿಸುವಿಕೆಯನ್ನು ಉತ್ತೇಜಿಸುವುದು
  - ಆಟಿಕೆಗಳನ್ನು ಆಯ್ಕೆ ಮಾಡುವುದು
  - ಕಥೆಗಳನ್ನು ಹೇಳುವುದು
  - ನಿಷ್ಪಕ್ಷಪಾತ ಆಟವನ್ನು ಪ್ರೋತ್ಸಾಹಿಸುವುದು
  - ಸ್ನೇಹವನ್ನು ಪ್ರೋತ್ಸಾಹಿಸುವುದು
  - ಲಿಂಗ ಆಧಾರಿತ ಕೆಲಸದ ವಿತರಣೆಯನ್ನು ತಪ್ಪಿಸುವುದು

## ಕೊನೆಯ ಅಭ್ಯಾಸ

1. ವೈವಿಧ್ಯ ಎಂಬ ಪದದಿಂದ ನೀವು ಏನು ಅರ್ಥಮಾಡಿಕೊಂಡಿದ್ದೀರಿ? ನಿಮ್ಮ ನೆರೆಹೊರೆಯ ಮಕ್ಕಳಲ್ಲಿ ನೀವು ಯಾವ ರೀತಿಯ ವೈವಿಧ್ಯವನ್ನು ಗಮನಿಸಿದ್ದೀರಿ? ವೈವಿಧ್ಯಕ್ಕೆ ಕಾರಣವಾಗುವ ಮುಖ್ಯ ಅಂಶಗಳು ಯಾವುವು?

2. ಪ್ರಿಸ್ಕೂಲ್/ಶಾಲಾಪೂರ್ವ ಶಿಕ್ಷಣದಲ್ಲಿ ಮಕ್ಕಳ ಲಿಂಗ ಸಮಾನ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ನೀವು ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ?
3. ಬಾಲ್ಯದ ಅನುಭವಗಳು ಸಾಂಸ್ಕೃತಿಕ ಮತ್ತು ಲಿಂಗ ಸಮಸ್ಯೆಗಳಿಂದ ಹೇಗೆ ಪ್ರಭಾವಿತವಾಗುತ್ತವೆ?
4. ECCE ಕೇಂದ್ರಕ್ಕೆ ಬಹುಭಾಷಿಕತೆಯ ಪರಿಣಾಮಗಳೇನು? ಬಹುಭಾಷಿಕತೆಯಿಂದಾಗಿ ವೈವಿಧ್ಯವನ್ನು ಸ್ವೀಕರಿಸುವ ಮತ್ತು ಗೌರವಿಸುವ ವಿಧಾನಗಳನ್ನು ಪಟ್ಟಿ ಮಾಡಿ.
5. ಬುಡಕಟ್ಟು ಮಕ್ಕಳೊಂದಿಗೆ ಕೆಲಸ ಮಾಡುವಾಗ ಮನೆ-ಶಾಲೆಯ ಭಾಷಾ ವಿಭಜನೆಯನ್ನು ನಿವಾರಿಸಲು ನೀವು ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ?

**ಪುಸ್ತಕದ ಪಠ್ಯದಲ್ಲಿನ ಪ್ರಶ್ನೆಗಳಿಗೆ ಉತ್ತರಗಳು - 20.1**

a) **ಜಾತಿ:** ಇದು ಹುಟ್ಟಿನಿಂದ ನಿರ್ಧರಿಸಲ್ಪಟ್ಟ ವರ್ಗೀಕರಣದ ವ್ಯವಸ್ಥೆಯಾಗಿದೆ.

b) **ಜನಾಂಗ:** ಜನಾಂಗವು ಭೌತಿಕ ಲಕ್ಷಣಗಳ ಆಧಾರದ ಮೇಲೆ ಮಾನವನ ವಿಭಜನೆಯಾಗಿದೆ

c) **ಬಹುಭಾಷಿಕತೆ:** ಒಬ್ಬ ವ್ಯಕ್ತಿ ಅಥವಾ ಒಂದು ಸಮುದಾಯ ಹಲವು ಭಾಷೆಗಳನ್ನು ಬಳಸುವ ಅಥವಾ ಹಲವು ಭಾಷಾ ಬಳಕೆಯನ್ನು ಪ್ರವರ್ಧಿಸುವ ಒಂದು ಭಾಷಾ ಪ್ರಕ್ರಿಯೆಯಾಗಿದೆ.

d) **ಜನಾಂಗೀಯತೆ:** ಸಮಾನ ರಾಷ್ಟ್ರೀಯ ಹಾಗೂ ಸಾಂಸ್ಕೃತಿಕ ಪರಂಪರೆಯೊಂದಿಗೆ ಒಂದು ಸಾಮಾಜಿಕ ಗುಂಪಿಗೆ ಸೇರಿರುವುದನ್ನು ಇದು ಸೂಚಿಸುತ್ತದೆ

e) **ಲಿಂಗ:** ಹುಡುಗ ಅಥವಾ ಹುಡುಗಿ/ಪುರುಷ/ಹೆಣ್ಣು ಎಂಬುದಕ್ಕೆ ಸಂಬಂಧಿಸಿದ ಸಾಮಾಜಿಕ, ಸಾಂಸ್ಕೃತಿಕ ಅಸ್ಮಿತೆಯನ್ನು ಸೂಚಿಸುತ್ತದೆ.

**20.2**

a) ತಪ್ಪು
b) ಸರಿ
c) ಸರಿ
d) ಸರಿ
e) ತಪ್ಪು

**20.3**

a) ಶಾಲೆಯಿಂದ ಹೊರಗುಳಿಯುವಿಕೆ
b) ಆತ್ಮೀಯತೆ
c) ಭಾಷಾ ವಿಭಜನೆ
d) ಮನೆ
e) ಶಾಲೆ

**20.4**

a) **ಆಟಿಕೆಗಳನ್ನು ಆಯ್ಕೆ ಮಾಡುವುದು:** ಮಕ್ಕಳನ್ನು ಉತ್ತೇಜಿಸುವ ಕೌಶಲ್ಯಕ್ಕಾಗಿ ಆಟಿಕೆಗಳನ್ನು ಆಯ್ಕೆ ಮಾಡುವುದು ಸೂಕ್ತವೇ ವಿನಃ ಮಗುವಿನ ಲಿಂಗಕ್ಕೆ ಅನುಗುಣವಾಗಿ ಆಟಿಕೆಗಳನ್ನು ಆಯ್ಕೆ ಮಾಡುವುದಲ್ಲ.
b) **ಕಥೆಗಳನ್ನು ಹೇಳುವುದು:** ಕಥೆಯಲ್ಲಿನ ಪಾತ್ರದ ಲಿಂಗಕ್ಕೆ ಕಾರಣವಾದ ಗುಣಲಕ್ಷಣಗಳಿಗೆ ಗಮನ ಕೊಡಿ.
c) **ನಿಷ್ಪಕ್ಷಪಾತ ಆಟ:** ಮಕ್ಕಳಿಗೆ ಆಡಲು ಅವರದೇ ಆದ ಆಯ್ಕೆಗಳಿಗಾಗಿ ಅನುಮತಿ ನೀಡಿ ಮತ್ತು ಮಕ್ಕಳು ತಮ್ಮ ಲಿಂಗವನ್ನು ಲೆಕ್ಕಿಸದೆ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿ.
d) **ಸ್ನೇಹ:** ಧ್ರುವೀಯತೆಯನ್ನು ತಪ್ಪಿಸಿ ಮತ್ತು ಎರಡೂ ಲಿಂಗಗಳ ನಡುವಿನ ಸ್ನೇಹವನ್ನು ಪ್ರೋತ್ಸಾಹಿಸಿ.
e) **ಕೆಲಸದ ವಿತರಣೆ:** ಒಂದು ನಿರ್ದಿಷ್ಟ ಲಿಂಗದ ಮಕ್ಕಳನ್ನು ನಿರ್ದಿಷ್ಟ ಕೆಲಸವನ್ನು ಮಾಡುವಂತೆ ಕೇಳಬೇಡಿ. ಮಕ್ಕಳಿಗೆ ಅವರದೇ ಆದ ಆಯ್ಕೆಯನ್ನು ಮಾಡಿಕೊಳ್ಳಲು ಪ್ರೋತ್ಸಾಹಿಸಿ ಮತ್ತು ಮಕ್ಕಳು ಸ್ವಯಂಪ್ರೇರಿತರಾಗಿ ಕೆಲಸ ನಿರ್ವಹಿಸಲಿ.

**ಆಕರಗಳು**:


- ಭಾರತಿ. (2018) ಮೇಕಿಂಗ್ ಪ್ರೈಮರಿ ಸ್ಕೂಲ್ಸ್ ಇನ್ ಕ್ಲೂಸಿವ್ ಇಂಡಿಯನ್ ಪರ್ಸ್ಪೆಕ್ಟಿವ್. ನವದೆಹಲಿ: ಗ್ಲೋಬಲ್ ಬುಕ್ಸ್ ಆರ್ಗನೈಸೇಶನ್.
- ಮನೆ ಭಾಷೆ ಮತ್ತು ಶಾಲಾ ಭಾಷೆಯ ನಡುವಿನ ಸಂಪರ್ಕವನ್ನು ಸುಗಮಗೊಳಿಸುವುದು – ಶಾಲೆಗಳು ಕಾರ್ಖಾನೆಗಳಲ್ಲ (ಎನ್.ಡಿ.) https://sites.google.com/site/schoolsnotfactories/ classroom-ideas/disconnect-of-home-language- vs-school-language ನಿಂದ ಮರುಪಡೆಯಲಾಗಿದೆ
- ಮೀನಾ, ಕೆ. (2015, ಜೂನ್ 7). ಭಾರತದ ವೈವಿಧ್ಯದ ಆಯಾಮಗಳು ಮತ್ತು ಅವುಗಳ ಸಂಘಟನೆಯ ಪರಿಣಾಮಗಳು: ಒಂದು ವಿಶ್ಲೇಷಣೆ. https://www.omicsonline.org/open-access/diversity-dimensions-of-india-and-their- organization-implications-an-analysis-2162-6359-1000261.php?aid=54873 ನಿಂದ ಪಡೆಯಲಾಗಿದೆ
- ನಿಮ್ಮ ತರಗತಿಯಲ್ಲಿ ಲಿಂಗ ಸಮಾನತೆಯನ್ನು ನೀವು ಉತ್ತೇಜಿಸುವ ಮಾರ್ಗಗಳು. (2019, ಸೆಪ್ಟೆಂಬರ್ 19). https://www.teachthought.com/education/ 6-ways-can-promote-gender-equality-classroom/ ನಿಂದ ಮರುಪಡೆಯಲಾಗಿದೆ
- ವೈವಿಧ್ಯ ಎಂದರೇನು?: ವೈವಿಧ್ಯವನ್ನು ಅರ್ಥಮಾಡಿಕೊಳ್ಳುವುದು & ಭಾರತದಲ್ಲಿ ಅದರ ಪ್ರಕಾರಗಳು. (2019, ಸೆಪ್ಟೆಂಬರ್ 12). https://www.toppr.com/guides/civics/ understanding-diversity/what-is-diversity/ ನಿಂದ ಪಡೆಯಲಾಗಿದೆ